ಸಂಪುಟ : 8 ಸಂಚಿಕೆ : 213 ಪುಟ : 4 ಬೆಲೆ : 3.00 ಶುಕ್ರವಾರ ಸಪ್ಟೆಂಬರ್ 29, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 213 Pages : 4 Price : 3.00 Friday September 29, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ದಿ. 29-09-2023 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು. **ಸ್ಥಳಗಳ ವಿವರ :** ವಾರ್ಡ್ ನಂಬರ್. 23 ರಲ್ಲಿ ಹಾರೋಗೇರಿ ಭಾಗ-1,2 ಹೆಬಸೂರ ಅವರ ಲೈನ್, ಹೊನ್ನತಮ್ಮನ ಗುಡಿ ಭಾಗ 1,2 ವಾರ್ಡ್ ನಂಬರ್. 20 ರಲ್ಲಿ ಸಿಟಿಹಾಳ್ ಭಾಗ 1, 2 ವಿಭೂತಿಯವರು ಓಣಿ, ಕುಲಕರ್ಣಿಗಲ್ಲಿ, ಹನುಮಾನ್ ಗರಡಿ, ಜಂತ್ಲಿ ಅವರ ಲೈನ್, ಕುಂಬಾರ ಓಣಿ, ವಾರ್ಡ್ ನಂಬರ್. 28 ರಲ್ಲಿ ಪಂಚಾಕ್ಷರಿ ನಗರ 5ನೇ ಕ್ರಾಸ್, ವಾರ್ಡ್ ನಂಬರ್ 1ರಲ್ಲಿ ಎಸ್ ಎಂ ಕೃಷ್ಣ ನಗರ ಮೇಲಿನ ಭಾಗ, ಕೆಳಗಿನ ಭಾಗ, ವಾರ್ಡ್ ನಂಬರ್. 19, 16, 18 ರಲ್ಲಿ ಮಡಿವಾಳ ದೇವಸ್ಥಾನ, ಕುಂಬಾರ ಓಣಿ ಹಳೆ ಮತ್ತು ಹೊಸ ಲೈನ್, ಬಾಗಲಕೋಟೆ ಅವರ ಲೈನ್, ಅಂಬೇಡ್ಕರ್ ನಗರ, ಹನುಮಾನ್ ದೇವರು ಗುಡಿ, ಜವಳಗಲ್ಲಿ, ಕೊನೇರಿ ಲೈನ್, ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರ ಸಭೆಯೊಂದಿಗೆ ಸಹಕರಿಸಬೇಕೆಂದು ಗದಗ-ಬೆಟಗೇರಿ ಪೌರಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಕುನಾಯಿಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಸಕ್ತ ಸಾಲಿನ ವಿಶ್ವ ರೇಬೀಸ್ ದಿನಾಚರಣೆ ಅಂಗವಾಗಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಗದಗ ಪಾಲಿಕ್ಲಿನಿಕ್ ವತಿಯಿಂದ ಸಾಕುನಾಯಿಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವು ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 27ರ ವರೆಗೆ ಹಮ್ಮಿಕೊಳ್ಳಲಾಗಿದೆ.

ಈ ಲಸಿಕೆಯು ಸಾಕಿದ ನಾಯಿಗಳಿಗೆ ಮಾತ್ರವಾಗಿರುತ್ತದೆ. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಗದಗ ಪಾಲಿಕ್ಲಿನಿಕ್‌ನಲ್ಲಿ ಸಾರ್ವಜನಿಕರು ತಮ್ಮ ಸಾಕುನಾಯಿಗಳಿಗೆ ಉಚಿತವಾಗಿ ರೇಬಿಸ್ ಲಸಿಕೆಯನ್ನು ಹಾಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9886395448ಗೆ ಸಂಪರ್ಕಿಸಬಹುದಾಗಿದೆ ಎಂದು ಗದಗ ಪಾಲಿಕ್ಲಿನಿಕ್ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶೃದ್ಧಾ-ಭಕ್ತಿಯಿಂದ ಪ್ರವಾದಿ ಮುಹಮ್ಮದ್ ಪೈಗಂಬರರ ಜನ್ಮದಿನ ಆಚರಣೆ

# ಪೈಗಂಬರರು ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮಹಾ ಮಾನವತಾವಾದಿ, ಶಾಂತಿದೂತ ಪ್ರವಾದಿ ಮುಹಮ್ಮದ್ ಪೈಗಂಬರರ ಜನ್ಮದಿನದ ಅಂಗವಾಗಿ ಪವಿತ್ರ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಸಮಾಜ ಬಾಂಧವರು ಗುರುವಾರ ಶೃದ್ಧಾ-ಭಕ್ತಿ ಮತ್ತು ವಿಜೃಂಭಣೆಯಿಂದ ಆಚರಿಸಿದರು.

ಹೊಸ ಉಡುಗೆ ಧರಿಸಿದ ಮುಸ್ಲಿಂ ಸಮಾಜ ಬಾಂಧವರು ಬೆಳಿಗ್ಗೆ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿದರು. ಬಳಿಕ ಪಟ್ಟಣದ ದೂದಪೀರಾಂ ದರ್ಗಾದಿಂದ ಆರಂಭಗೊಂಡ ಮೆರವಣಿಗೆ ಮುಖ್ಯ ಬಜಾರ್ ರಸ್ತೆ, ಶಿಗ್ಲಿ ನಾಕಾ, ಗದಗ ನಾಕಾ, ಮೋಮಿನಗಲ್ಲಿ, ಬಳಿಗಾರ ಓಣಿಯ ಮೂಲಕ ಸಾಗಿ ದರ್ಗಾದಲ್ಲಿ ಸಂಪನ್ನಗೊಂಡಿತು. ಹಿರಿಯರು, ಯುವಕರು, ಮಕ್ಕಳು ಸೇರಿ ಸಾವಿರಾರು ಸಂಖ್ಯೆಯ ಮುಸ್ಲಿಂ ಬಾಂಧವರು ಹೊಸ ಉಡುಗೆ ತೊಟ್ಟು ಧರ್ಮದ ಘೋಷಣೆ ಕೂಗುತ್ತಾ ಹರ್ಷದಿಂದ ಪಾಲ್ಗೊಂಡಿದ್ದರು.

> ಮೆರವಣಿಗೆ ವೇಳೆ ಮುಸ್ಲಿಂ ಬಾಂಧವರು ಜನತೆಗೆ ಸಿಹಿ, ಹಣ್ಣು, ತಂಪುಪಾನೀಯ ವಿತರಿಸಿದರು. ಹಬ್ಬದ ಅಂಗವಾಗಿ ಪಟ್ಟಣದಲ್ಲಿರುವ ಮಸೀದಿ, ತಮ್ಮ ಅಂಗಡಿ, ಮನೆಗಳಿಗೆ ವಿದ್ಯುತ್, ಪುಷ್ಪಾಲಂಕಾರ ಮಾಡಲಾಗಿತ್ತು.

ಈ ವೇಳೆ ಮಾತನಾಡಿದ ಅಂಜುಮನ್ ಕಮಿಟಿ ಅಧ್ಯಕ್ಷ ಎಂ.ಎಂ ಗದಗ ಅವರು, ಮುಹಮ್ಮದ್ ಪೈಗಂಬರ್ ಅವರು ಇಡೀ ಮಾನವ ಕುಲದ ಒಳಿತಿಗಾಗಿ ಶಾಂತಿ, ಸಮಾನತೆಯ ಸಂದೇಶ ಸಾರಿದ್ದಾರೆ.

ಸರಳ, ಸಚ್ಚಾರಿತ್ರ್ಯ ಮತ್ತು ತ್ಯಾಗಭರಿತ ಬದುಕಿನ್ನು ಸವೆಸಿ ಅವರು 'ನನ್ನ ಜೀವನವೇ ನನ್ನ ಸಂದೇಶ' ಎಂಬಂತೆ ಬದುಕಿ ಮನುಕುಲದಲ್ಲಿ ಚಿರಸ್ಥಾಯಿಯಾಗಿದ್ದಾರೆ. ದೇವನ ಸಂದೇಶವಾಹಕರಾಗಿ ಮಾನವ ಸಮೂಹಕ್ಕೆ ಜ್ಞಾನದ ಬೆಳಕು ಮತ್ತು ಸನ್ಮಾರ್ಗದ ಹಾದಿಯನ್ನು ತೋರಿಸಿದ ಪೈಗಂಬರರು ತಿಳಿಸಿದ ಅಪ್ರತಿಮ ಪ್ರೀತಿ, ತಾಳ್ಮೆ, ಕ್ಷಮೆ, ವಿನಯ, ಕರುಣೆ ಮತ್ತು ಮಾನವೀಯ ಮೌಲ್ಯಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದರು.

ಮೆರವಣಿಗೆ ಸಂದರ್ಭದಲ್ಲಿ ಸಮಾಜದ ಹಿರಿಯರ ನಿರ್ಣಯದಂತೆ ಅಬ್ಬರದ ಡಿಜೆ ಬಳಸದೇ ಸದ್ದು ಗದ್ದಲವಿಲ್ಲದಂತೆ ಶಾಂತಿಯುತ ಮೆರವಣಿಗೆ ಕೈಗೊಂಡರು. ಮೆರವಣಿಗೆಯುದ್ದಕ್ಕೂ ಸ್ವಚ್ಛತೆ ಕಾಪಾಡಿದ್ದು ಪ್ರಶಂಸೆಗೆ ಕಾರಣವಾಯಿತು.

ಕಾರ್ಯಕ್ರಮದಲ್ಲಿ ದೂದಪೀರಾಂ ದರ್ಗಾ ಸಮಿತಿ ಅಧ್ಯಕ್ಷ ಸುಲೇಮಾನ ಕಣಕೆ, ಡಿ.ಜೆ ಮುಚ್ಚಾಲೆ, ಎಸ್.ಕೆ ಹವಾಲ್ದಾರ, ವೀರ ಕನ್ನಡಿಗ ಟಿಪ್ಪು ಸೇನೆಯ ಅಧ್ಯಕ್ಷ ಜಾಕೀರಹುಸೇನ್ ಹವಾಲ್ದಾರ, ಅಂಜುಮನ್ ಕಮಿಟಿ ಉಪಾಧ್ಯಕ್ಷ ಅಬ್ದುಲ್‌ಕರೀಂ ಸೂರಣಗಿ,



ಮಾಜಿ ಅಧ್ಯಕ್ಷ ಅನ್ವರಸಾಬ ಹವಾಲ್ದಾರ, ಅಬ್ದುಲ್‌ಕರೀಂ ಕರೀಂಖಾನವರ, ಮುಸ್ತಾಕ್‌ಅಹ್ಮದ ಶಿರಹಟ್ಟಿ, ಎನ್.ಎಂ ಗದಗ, ಪಿರ್ದೋಶ ಆಡೂರ, ಸಿಕಂದರ ಕಣಕೆ, ರಾಮಣ್ಣ ಗಡದವರ, ವಿಜಯ ಕರಡಿ, ದಾದಾಪೀರ ತಂಬಾಕದ ಮತ್ತಿತರರಿದ್ದರು. ಸಂಜೆ ಧರ್ಮಸಭೆ ನಡೆಯಿತು.

### ಅಂಜುಮನ್-ಎ-ಇಸ್ಲಾಂ ಕಮಿಟಿ ವತಿಯಿಂದ ಸಂಭ್ರಮದ ಈದ್ ಮಿಲಾದ್

# ಮುಹಮ್ಮದ್ ಪೈಗಂಬರರು ಮಾನವ ಕುಲಕ್ಕೆ ದಾರಿದೀಪ



**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಮುಹಮ್ಮದ್ ಪೈಗಂಬರರು ವಿಶ್ವಮಾನ್ಯರು. ಅವರು ತಮ್ಮ ಬದುಕನ್ನು ಮಾನವ ಕುಲಕ್ಕೆ ಮುಡಿಪಾಗಿಟ್ಟವರು. ಮಾನವ ಉದ್ಧಾರಕ್ಕಾಗಿ ಅಪಾರ ತ್ಯಾಗ, ಬಲಿದಾನಗೈದ ಮಹಾತ್ಮರು ಎಂದು ನಾಡೋಜ ಡಾ.ಅನ್ನದಾನೀಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿ ಈದ್ ಮಿಲಾದ್ ಅಂಗವಾಗಿ ಅಂಜುಮನ್-ಎ-ಇಸ್ಲಾಂ ಕಮಿಟಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಳಗಟ್ಟಿಯ ಹಜರತ್ ಮುಸ್ತಫಾ ಖಾದ್ರಿಯವರು ಮಾತನಾಡಿ, ಪ್ರವಾದಿ ಮುಹಮ್ಮದ್ ಪೈಗಂಬರರು ಮಹಿಳೆಯರಿಗಾಗಿ, ಧರ್ಮಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ದಾನ-ಧರ್ಮ ಮಾಡುವುದಕ್ಕೆ ಕರೆ ನೀಡಿದರು ಎಂದರು.

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ತಹಸೀಲ್ದಾರ್ ಧನಂಜಯ್ ಎಂ., ಸಿಪಿಐ ಮಂಜುನಾಥ ಕುಸಗಲ್ಲ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಬುಸಾಬ್ ನಾಗರಹಳ್ಳಿ ಕುರಾನ್ ಪಠಣ ಮಾಡಿದರು.

ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಅಂಜುಮನ್-ಎ-ಇಸ್ಲಾಂ ಕಮಿಟಿ ಅಧ್ಯಕ್ಷ ಮೆಹಬೂಬಸಾಬ್ ಹವಾಲ್ದಾರ್, ಕರಬಸಪ್ಪ ಹಂಚಿನಾಳ, ರಫೀಕ್ ಮುಲ್ಲಾ, ರಾಜಾಭಕ್ಷೀ ಬೆಟಗೇರಿ, ರೈಮಾನಸಾಬ್ ಮಲ್ಲನಕೇರಿ, ಎಂ.ಎ ನದಾಫ್, ಅಬ್ದುಲ್‌ಸಾಬ ಕೊಕ್ಕರಗುಂದಿ, ನಬೀಸಾಬ್ ಕೆಲೂರ, ಎಸ್.ಡಿ ಮಕಾಂದಾರ, ಜಾಪರಸಾಬ್ ಬಚ್ಚೇರಿ, ವಿ.ಎಸ್ ಗಟ್ಟಿ, ಆರ್.ಎಂ ಸೈದರ್, ಎಂ.ಜಿ ವಡ್ಡಟ್ಟಿ, ಡಿ.ಎಂ ಕಾತರಕಿ ಇತರರು ಇದ್ದರು. ಎ.ಕೆ ಮುಲ್ಲಾನವರ ಕಾರ್ಯಕ್ರಮ ನಿರೂಪಿಸಿದರು.

## ಅ. 1ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಗದಗ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಗೂ ಜಿಲ್ಲೆಯ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸೇವಾನಿರತ ಸ್ವಯಂ ಸೇವಾ ಸಂಸ್ಥೆ ಮತ್ತು ಸಂಘಗಳ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ 1 ರಂದು ಮುಂಜಾನೆ 11 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.




ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಅವರುಗಳು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸರ್ಕಾರದ ಮುಖ್ಯ ಸಚೇತಕರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರುಗಳಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್, ಶಾಸಕರುಗಳಾದ ಸಿ.ಸಿ.ಪಾಟೀಲ, ಜಿ.ಎಸ್.ಪಾಟೀಲ, ಡಾ.ಚಂದ್ರು ಲಮಾಣಿ, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಅವರು ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ. ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಗುರುಪ್ರಸಾದ ಅವರುಗಳು ಆಗಮಿಸುವರು.

### ಶಿರಹಟ್ಟಿ ಸಾರಿಗೆ ಘಟಕದ ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಸಾರ್ವಜನಿಕರಿಂದ ಧರಣಿ

# ಇದ್ದೂ ಇಲ್ಲದಂತಾದ ಬಸ್ ಡಿಪೋ



**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ಸಾರಿಗೆ ಘಟಕವನ್ನು ಹಳೆಯ ಗುಜರಿ ಬಸ್‌ಗಳನ್ನು ನೀಡಿ ಪ್ರಾರಂಭ ಮಾಡಿದ್ದು, ಘಟಕದ ಅವ್ಯವಸ್ಥೆಯನ್ನು ಖಂಡಿಸಿ ಗುರುವಾರ ಶಿರಹಟ್ಟಿ ಪಟ್ಟಣದ ಸಾರ್ವಜನಿಕರು ಘಟಕದ ಗೇಟ್ ಬಂದ್ ಮಾಡಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ.ಪಂ ಮಾಜಿ ಅಧ್ಯಕ್ಷ ನಾಗರಾಜ ಲಕ್ಕುಂಡಿ, ಗೂಳಪ್ಪ ಕರಿಗಾರ, ಶಿರಹಟ್ಟಿ ಡಿಪೋದ ಬಸ್ಸುಗಳು ಎಲ್ಲೆಂದರಲ್ಲಿ ಕೆಟ್ಟು ನಿಲ್ಲುವ ಪರಿಸ್ಥಿತಿ ಉಂಟಾಗಿದೆ. ಇದರಿಂದ ತಾಲೂಕಿನ ಪ್ರಯಾಣಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ತೀವ್ರ ತೊಂದರೆಯಾಗಿ, ಬಸ್ ಡಿಪೋ ಇದ್ದೂ ಇಲ್ಲದಂತಾಗಿದೆ. ಕಳೆದ ಮೂರು ದಿನದ ಹಿಂದೆ ಪಣಜಿ ಹೋಗಿದ್ದ ಬಸ್ಸು ಅಲ್ಲೇ ಕೆಟ್ಟು ನಿಂತಿದೆ. ಗದಗ ಬಸ್ ಡಿಪೋದಿಂದ ನಮ್ಮ ಡಿಪೋಕ್ಕೆ ಎರಡು ಬಸ್ಸುಗಳನ್ನ ಕೊಟ್ಟಿದ್ದಾರಾದರೂ, ಮತ್ತೆ ಎರಡು ಬಸ್ಸುಗಳನ್ನು ನಮ್ಮ ಡಿಪೋದಿಂದ ವಾಪಸ್ ತೆಗೆದು-ಕೊಂಡು ಹೋಗಿದ್ದಾರೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

> ಸಾರಿಗೆ ಇಲಾಖೆಯ ಮೇಲಾಧಿಕಾರಿಗಳು ಸ್ಥಳಕ್ಕಾಗಮಿಸಿ ನಮ್ಮ ಅಹವಾಲನ್ನು ಸ್ವೀಕರಿಸಿ, ಸೂಕ್ತ ಬಸ್ಸುಗಳ ವ್ಯವಸ್ಥೆ ಮಾಡುವವರೆಗೂ ಧರಣಿ ನಿಲ್ಲಿಸುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಸ್ಥಳಕ್ಕಾಗಮಿಸಿದ ಜಿಲ್ಲಾ ಸಾರಿಗೆ ಅಧಿಕಾರಿಗಳು ಪ್ರತಿಭಟನಾಕಾರರ ಮನವಿಯನ್ನು ಸ್ವೀಕರಿಸಿ, ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲು ಕ್ರಮ ವಹಿಸುತ್ತೇವೆ, ಗದಗ ಡಿಪೋಗೆ ಒದಗಿಸಿದ ಬಸ್‌ಗಳನ್ನು ಪುನಃ ಶಿರಹಟ್ಟಿ ಡಿಪೋಗೆ ನೀಡುತ್ತೇನೆ ಎಂದು ಭರವಸೆ ನೀಡಿದ ನಂತರ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆ ಹಿಂಪಡೆದರು.

ಈ ಸಂದರ್ಭದಲ್ಲಿ ಪ.ಪಂ ಸದಸ್ಯರಾದ ಸಂದೀಪ ಕಪ್ಪತನವರ, ಗೂಳಪ್ಪ ಕರಿಗಾರ, ಯಲ್ಲಪ್ಪ ಇಂಗಳಗಿ ಫಕೀರೇಶ ರಟ್ಟಿಹಳ್ಳಿ, ಅಕ್ಬರ ಸಾಬ್ ಯಾದಗಿರಿ, ಫಕೀರೇಶ ಕರಿಗಾರ, ಅಶೋಕ ವರವಿ, ರಾಮಣ್ಣ ಕಂಬಳಿ, ಪರುಶುರಾಮ ಡೊಂಕಬಳ್ಳಿ, ಮಂಜುನಾಥ ಸೊಂಟನೂರ, ಶಿವಪ್ಪ ಬಟ್ಟೂರ, ಫಕೀರೇಶ ನಿಟ್ಟಾಲಿ, ರಫೀಕ ಕೆರಿಮನಿ, ದೇವಪ್ಪ ಪೂಜಾರ, ಮಂಜುನಾಥ ವಡ್ಡರ, ಜಗದೀಶ ತೇಲಿ, ಸಂತೋಷ ಕುಬೇರ ಇದ್ದರು.

## ರಾಷ್ಟ್ರೀಯ ರೇಬಿಸ್ ಲಸಿಕಾ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ನರಗುಂದ**

ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಯೋಜನೆಯಡಿಯಲ್ಲಿ 4ನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ಚಿಕ್ಕನರಗುಂದ ಪಶು ಆಸ್ಪತ್ರೆಯಲ್ಲಿ ಗೋಪೂಜೆ ನೆರವೇರಿಸುವ ಮೂಲಕ ಗ್ರಾ.ಪಂ ಮಾಜಿ ಅಧ್ಯಕ್ಷ ಮುತ್ತು ರಾಯರಡ್ಡಿ ಚಾಲನೆ ನೀಡಿದರು.

ವಿಶ್ವ ರೇಬಿಸ್ ದಿನದ ಆಚರಣೆಯ ಅಂಗವಾಗಿ ರೇಬಿಸ್ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರೇಬಿಸ್ ಲಸಿಕೆ ನೀಡಿ ರೇಬಿಸ್ ರೋಗ ಮುಕ್ತ ವಲಯವನ್ನಾಗಿಸಬೇಕು. ಒಂದು ತಿಂಗಳ ಕಾಲ ನಡೆಯುವ ಲಸಿಕಾ ಕಾರ್ಯಕ್ರಮದಲ್ಲಿ ಪಶು ಆಸ್ಪತ್ರೆಯ ಸಿಬ್ಬಂದಿಗಳು ಚಿಕ್ಕನರಗುಂದ, ಬೆನಕನಕೊಪ್ಪ, ಸಂಕದಾಳ, ಅರಿಷಿನಗೋಡಿ, ಹಿರೇಕೊಪ್ಪ, ಕುರಗೋವಿನಕೊಪ್ಪ ಗ್ರಾಮದ ರೈತರ ಮನೆ ಬಾಗಿಲಿಗೆ ಬಂದು ರಾಸುಗಳಿಗೆ ಲಸಿಕೆ ಹಾಕಲಿದ್ದಾರೆ. ಹೀಗಾಗಿ ಎಲ್ಲಾ ಗ್ರಾಮದ ರೈತರು ತಪ್ಪದೇ ಜಾನುವಾರುಗಳಿಗೆ ಲಸಿಕೆ ಹಾಕಿಸಬೇಕೆಂದರು.

ಚಿಕ್ಕನರಗುಂದ ಪಶು ವೈದ್ಯಕೀಯ ಪರೀಕ್ಷಕ ವೈ.ಎಸ್ ಚಂದ್ರಗಿರಿ ಮಾತನಾಡಿ, ಪಶು ಚಿಕಿತ್ಸಾಲಯ ಚಿಕ್ಕನರಗುಂದ ವ್ಯಾಪ್ತಿಗೆ ಬರುವ 6 ಹಳ್ಳಿಗಳ 3572 ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ ಹೊಂದಿದ್ದು, ಕಾರ್ಯಕ್ರಮವನ್ನು ಎಲ್ಲರೂ ಅಚ್ಚುಕಟ್ಟಾಗಿ ಯಶಸ್ವಿಗೊಳಿಸಬೇಕು. ಎಲ್ಲ ರೈತರು ತಮ್ಮ ತಮ್ಮ ಜಾನುವಾರುಗಳಿಗೆ ಕಡ್ಡಾಯವಾಗಿ ಲಸಿಕೆಯನ್ನು ಹಾಕಿಸಿಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿವಾನಂದ ಬಾಚಿ, ಮಂಜುನಾಥ ಹೂಲಿ, ಮಲ್ಲು ಹೊಸಗಾಣಿಗೇರ, ಶಿವು ಮೇಟಿ, ಚನ್ನಪ್ಪ ಹಡಪದ, ಪಶು ಚಿಕಿತ್ಸಾಲಯ ಸಿಬ್ಬಂದಿಗಳು, ಪಶು ಸಖಿಯರು ಭಾಗವಹಿಸಿದ್ದರು.



### ಲಕ್ಕುಂಡಿಯಲ್ಲಿ ಸಂಭ್ರಮದ ಈದ್ ಮಿಲಾದ್ ಆಚರಣೆ

# ಗುರುಗಳ ಗುಣಗಾನವೇ ಈದ್ ಮಿಲಾದ್ ಉದ್ದೇಶ



**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಪ್ರವಾದಿ ಮುಹಮ್ಮದ್ ಪೈಗಂಬರರು ಈ ಜಗತ್ತಿಗೆ ನೀಡಿದ ತತ್ವೋಪದೇಶಗಳನ್ನು ಅಳವಡಿಸಿಕೊಂಡು ನಾವೆಲ್ಲರೂ ಸಹೋದರರಂತೆ ಬಾಳಬೇಕಾಗಿದೆ ಎಂದು ಹಳ್ಳಿಕೇರಿಯ ಹಾಜಿ ಮೌಲಾನಾ ಹೇಳಿದರು.

ಇಲ್ಲಿಯ ಅಂಜುಮನ್ ಇಸ್ಲಾಂ ಕಮಿಟಿಯು ಹಮ್ಮಿಕೊಂಡಿದ್ದ ಪ್ರವಾದಿ ಮುಹಮ್ಮದ್ ಪೈಗಂಬರರ ಜಯಂತಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಜಗತ್ತಿನಲ್ಲಿರುವ ಪ್ರತಿಯೊಬ್ಬ ಗುರುಗಳು, ಪ್ರತಿಯೊಬ್ಬರ ಬಗ್ಗೆ ಕಾಳಜಿ ವಹಿಸಿದ್ದಾರೆ. ನೋವುಗಳೆಲ್ಲವನ್ನು ನುಂಗಿ ಈ ಸಮಾಜದ ನೆಮ್ಮದಿಗಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಅಣ್ಣ ಬಸವಣ್ಣನವರ ಮಾತಿನಂತೆ ಮುಹಮ್ಮದ್ ಪೈಗಂಬರರು ಈ ಜಗತ್ತೇ ಒಂದು ಮನೆ, ಇಲ್ಲಿರುವವರೆಲ್ಲರೂ ಒಂದೇ ಕುಟುಂಬದ ಸದಸ್ಯರಿದ್ದಂತೆ ಎಂದು ಹೇಳಿ ಸಮಾನತೆಯ ಸಂದೇಶವನ್ನು ನೀಡಿದ್ದಾರೆ. ಇಲ್ಲಿ ಹಲವು ಜಾತಿ, ಧರ್ಮಗಳಿದ್ದು, ದೇವರನ್ನು ಕಾಣಲು ಒಬ್ಬೊಬ್ಬರಿಗೆ ಒಂದೊಂದು ಮಾರ್ಗಗಳಿವೆ ಎಂದ ಅವರು, ಗುರುಗಳ ಗುಣಗಾನ ಮಾಡುತ್ತಾ ಅವರ ಜಯಂತಿಯನ್ನು ಪವಿತ್ರವಾಗಿ ಆಚರಿಸುವುದೇ ಈದ್ ಮಿಲಾದ್ ಆಚರಣೆಯ ಉದ್ದೇಶವಾಗಿದೆ ಎಂದರು.

> ಇದಕ್ಕೂ ಪೂರ್ವ ಗ್ರಾಮದ ಪಾಪನಾಶಿ ರಸ್ತೆಯಲ್ಲಿ ಇರುವ ಮೆಬೂಬೂಬ ಸುಬಾನಿ ದರ್ಗಾದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಮುಹಮ್ಮದ್ ಪೈಗಂಬರರ ಸಂದೇಶ ಸಾರುವ ಹಾಡುಗಳನ್ನು ಹೇಳುತ್ತಾ, ಹಿರೇಮಸೂತಿಗೆ ಬರಲಾಯಿತು. ನತರ ಅನ್ನಸಂತರ್ಪಣೆ ನೆರವೇರಿತು.

ಮಂಗಳೂರಿನ ಸಾಲೀಮ್ ಸಖಾಪಿ ಅವರು ಮಾತನಾಡಿ, ಪ್ರವಾದಿ ಮುಹಮ್ಮದ ಪೈಗಂಬರರು ಪರಸ್ಪರ ಪ್ರೀತಿ, ಅನ್ಯೋನತೆ, ಸೌಹಾರ್ದತೆ, ಸಮಾನತೆಯಿಂದ ಕಾಣುವ ಸಂದೇಶವನ್ನು ಸಾರಿದ್ದಾರೆ. ಆದ್ದರಿಂದ ಈ ಭಾರತ ದೇಶದಲ್ಲಿಯ ಪ್ರತಿಯೊಬ್ಬರೂ ▸▸ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಚೆನ್ನಾಗಿ ಮಾತನಾಡಲು ಚಾತುರ್ಯವಿರಬೇಕು;
ಆದರೆ ಕೇಳಿದ್ದನ್ನು ಅರ್ಥಮಾಡಿಕೊಳ್ಳಲು
ಬುದ್ಧಿವಂತಿಕೆ ಇರಬೇಕು.

–ಸುಭಾಷಿತ

## ಸಂಪಾದಕೀಯ

# ಗುಂಡಿ ಮುಕ್ತ ಹೆದ್ದಾರಿಗೂ ನೀತಿ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೆದ್ದಾರಿಗಳನ್ನು ಗುಂಡಿಗಳಿಂದ ಮುಕ್ತ ಮಾಡುವ ನಿಟ್ಟಿನಲ್ಲಿ ನೀತಿಯೊಂದನ್ನು ರೂಪಿಸಿದ್ದಾರೆ. ಗುಂಡಿಗಳನ್ನ ಮುಚ್ಚುವುದಕ್ಕೂ ನೀತಿಯೊಂದರ ಅಗತ್ಯ ಎಷ್ಟಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಹೆದ್ದಾರಿ ಅಥವಾ ರಾಜ್ಯ, ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿಗಳಿಂದ ಆಗುವ ಅಪಾಯಗಳ ಎಷ್ಟು ಇದೆ ಎನ್ನುವುದನ್ನು ಎಲ್ಲರಿಗೂ ಗೊತ್ತಿರುವ ವಿಚಾರ. ದೇಶದಲ್ಲಿ ಸಾವಿರಾರು ಜನ ರಸ್ತೆಗುಂಡಿಗಳಿಂದ ಆಗುವ ಅಪಘಾತದಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಅದರಲ್ಲೂ ಕರ್ನಾಟಕದಲ್ಲಿ ಇತ್ತೀಚೆಗಷ್ಟೇ ನಿರ್ಮಾಣವಾದ ಮೈಸೂರು ಹೆದ್ದಾರಿಯಲ್ಲಿ ಎಷ್ಟು ಜನ ಪ್ರಾಣ ಕಳೆದುಕೊಂಡರು, ಅದು ದೇಶಾದ್ಯಂತ ಸೃಷ್ಟಿಸಿದ ಸಂಚಲನದ ಬಗ್ಗೆ ಸ್ಪಷ್ಟ ಅರಿವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಕೈಗೊಳ್ಳುತ್ತಿರುವ ನಿರ್ಧಾರ ಅತ್ಯಂತ ಉಪಯುಕ್ತವಾಗಿದೆ.

ಗುಂಡಿಗಳನ್ನ ಮುಚ್ಚುವುದು ಅತ್ಯಂತ ಸಣ್ಣ ಕೆಲಸ. ಆದರೂ ಈ ಕೆಲಸಕ್ಕಾಗಿ ಕೇಂದ್ರ ಸಚಿವರು ನೀತಿ ರೂಪಿಸುವಂತಹ ನಿರ್ಧಾರವನ್ನು ಕೈಗೊಳ್ಳುವ ಹಿಂದೆ ರಸ್ತೆ ಸುರಕ್ಷತೆಯ ಉದ್ದೇಶ ಅಡಗಿದೆ.

ಸುಮಾರು 1.46 ಲಕ್ಷ ಕಿಲೋಮೀಟರ್ ಉದ್ದದ ಹೆದ್ದಾರಿಗಳ ಮ್ಯಾಪಿಂಗ್ ಮಾಡಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಲಕ್ಷಾಂತರ ಕಿಲೋಮೀಟರ್ ಉದ್ದದ ಮಾರ್ಗದಲ್ಲಿನ ಗುಂಡಿಗಳನ್ನ ಮುಚ್ಚಲು ನಿರ್ಧಾರ ಕೈಗೊಳ್ಳಲಾಗಿದೆ.

ಈ ನೀತಿ ಜಾರಿಗೆ ಅನೇಕ ತಾಂತ್ರಿಕ ಮಾಹಿತಿಯನ್ನು ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್ ಹಂಚಿಕೊಂಡಿದ್ದಾರೆ. ಇಂಥ ಒಂದು ನೀತಿ ರಾಜ್ಯದಲ್ಲಿಯೂ ಜಾರಿಯಾಗಬೇಕಿದೆ. ಆ ಮೂಲಕ ಹೆದ್ದಾರಿ ಮಾತ್ರವಲ್ಲ, ಜಿಲ್ಲಾ, ತಾಲೂಕು ಮುಖ್ಯ ರಸ್ತೆಗಳು ಸಹ ಗುಂಡಿ ಮುಕ್ತವಾಗಬೇಕಿದೆ.

### ಎಲ್ಲಾ ಸಲ ಅನಗತ್ಯವಾಗಿ ಬುದ್ಧಿವಂತಿಕೆಯನ್ನು ಪ್ರದರ್ಶಿಸಲು ಮುಂದಾಗಬೇಡಿ

# ಅತಿ ಬುದ್ಧಿವಂತಿಕೆ ಕುತ್ತು ತಂದೀತು!



ಬುದ್ಧಿವಂತಿಕೆಯೆಂಬುದು ಯಾರ ಸೊತ್ತು ಸ್ವಾಮೀ? ಯಾರೂ ಕೂಡ ಹುಟ್ಟುತ್ತಲೇ ವರ ಪಡೆದು ಬುದ್ಧಿವಂತರಾಗಿರುವುದಿಲ್ಲ. ಆಯಾ ಸಂದರ್ಭಕ್ಕನುಗುಣವಾಗಿ ತಾಳ್ಮೆಯಿಂದ ಯೋಚಿಸಿ ಪ್ರತಿಕ್ರಿಯಿಸುವ ಪ್ರತಿಯೊಬ್ಬರೂ ಬುದ್ಧಿವಂತರೇ ಆಗಿರುತ್ತಾರೆ. ಇಂಥದೊಂದು ಸಂದರ್ಭಕ್ಕೆ ಹೊಂದುವಂತೆ ಜಪಾನ್‌ನಲ್ಲಿ ಒಂದು ಕಥೆ ಪ್ರಚಲಿತದಲ್ಲಿದೆ. ಕಥೆ ಅಲ್ಲಿಯದೇ ಆದರೂ ನಮ್ಮೂರಿಗೆ ಕಥೆಯನ್ನು ಹೊಂದಿಸಿಕೊಂಡು ಓದೋಣ. ಏನಂತೀರಿ?

ಒಂದು ಕಾಲದಲ್ಲಿ ಇಲ್ಲೆಲ್ಲೋ ನಂಜನಗೂಡು ಬಳಿಯ ಹಳ್ಳಿಯಲ್ಲಿ ಒಬ್ಬ ಪಟೇಲನಿದ್ದ, ರಂಗೇಗೌಡ. ಅವನಿಗಾದರೋ, ತಲೆತಲಾಂತರದಿಂದ ಸಾಕಷ್ಟು ಎಕರೆ ಭೂಮಿ ಬಳುವಳಿಯಾಗಿ ಬಂದಿತ್ತು. ನೂರಾರು ಎಕರೆ ಭೂಮಿ. ಎಲ್ಲೆಲ್ಲೂ ಸಮೃದ್ಧನೀರು. ಹೀಗಿದ್ದರೂ, ರಂಗೇಗೌಡ ಭಲೇ ಆಸೆಬುರುಕ. ಹೀಗಿದ್ದಾಗ, ಅವನ ಜಮೀನಿನ ಗಡಿಯಲ್ಲಿ ಬೇಸಿಗೆಯಲ್ಲೂ ತುಂಬಿ ಉಕ್ಕುವ ಬಾವಿಯೊಂದಿತ್ತು. ಆದರೆ, ಅವನು ಅದನ್ನು ಬಳಸುತ್ತಿರಲಿಲ್ಲ. ಆದ್ದರಿಂದ ರಂಗೇಗೌಡ ಅದನ್ನು ಪಕ್ಕದ ಜಮೀನಿನ ಹೊಂಬಾಳೆಗೌಡನಿಗೆ ಮಾರಾಟ ಮಾಡಿದ.

ಒಂದು ದಿನ, ಹೊಂಬಾಳೆಗೌಡ ಎದುರಾದಾಗ, ಅಡುಗೆಗೆ, ದನಕರುಗಳಿಗೆ ಎಂದು ಬಾವಿಯಿಂದ ನೀರನ್ನು ಪಂಪ್ ಮಾಡುತ್ತಿರುವುದನ್ನು ನೋಡಿದಾಗ, ರಂಗೇಗೌಡ ತಕ್ಷಣ ಅವನನ್ನು ತಡೆದ. 'ಅಲ್ಲಾ ಕಣೋ, ನಾನು ನಿನಗೆ ಬಾವಿಯನ್ನು ಮಾತ್ರ ಮಾರಾಟ ಮಾಡಿದ್ದೇನೆ. ಅದರಲ್ಲಿರುವ ನೀರನ್ನು ನೀನು ಬಳಸಬಹುದು ಅಂತ ಒಪ್ಪಿಗೆ ಕೊಟ್ಟವರು ಯಾರು? ಇಂದೇ ಈ ಕೆಲಸ ನಿಲ್ಲಿಸು' ಎಂದ.

ಹೊಂಬಾಳೆಗೌಡನಿಗೆ ತಲೆ ಗಿರ್ರೆಂದಿತು. ಅವನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ.ಪಟೇಲರು ಹೇಳಿದ ವಿಚಾರ ಸರಿಯಾದರೂ, ಒಪ್ಪಿಕೊಳ್ಳುವುದು ಹೇಗೆ? ಬಾವಿ ನನ್ನದಾದ ಮೇಲೆ, ಅದರಲ್ಲಿರುವ ನೀರು ಮಾತ್ರ ನನ್ನದಲ್ಲವಾ? ಈಗ ಬಾವಿ ನೀರಿನಿಂದ ತುಂಬಿದೆ. ನೀರಿನ ಅಗತ್ಯವೂ ಇದೆ. ಈಯಪ್ಪ ನೋಡಿದರೆ ನೀರಿನ ಹಕ್ಕು ನಿನ್ನದಲ್ಲ ಎನ್ನುತ್ತಿದ್ದಾನೆ. ಏನೇ ಆದರೂ, ನೀರಿನ ಅಗತ್ಯ ಇರುವುದರಿಂದಲೇ ಬಾವಿ ಖರೀದಿಸಿದ್ದೇನಲ್ಲ. ಪಟೇಲನೊಂದಿಗೆಲೀ ಸಮಸ್ಯೆಯನ್ನು ಹೇಗೆ ಪರಿಹರಿಸುವುದು ಎಂದು ಯೋಚಿಸಿದ ನಂತರ, ಹೊಂಬಾಳೆಗೌಡ ಪ್ರಕರಣವನ್ನು ಜಿಲ್ಲಾ ನ್ಯಾಯಾಲಯಕ್ಕೆ ತರಲು ನಿರ್ಧರಿಸಿದ. ನ್ಯಾಯ ಸಿಗುತ್ತದೆ ಎಂಬ ಭರವಸೆಯೂ ಅವನಿಗಿತ್ತು. ನ್ಯಾಯಾಲಯದಲ್ಲಿ, ಹೊಂಬಾಳೆಗೌಡ ತನ್ನ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ಸಲುವಾಗಿ ಏನನ್ನೂ ಮರೆಮಾಚದೆ ಆರಂಭದಿಂದ ಕೊನೆಯವರೆಗೆ ಕಥೆಯನ್ನು ವಿವರಿಸಿದ.

ಜಿಲ್ಲಾ ನ್ಯಾಯಾಧೀಶರು ಬುದ್ಧಿವಂತನಾದ ರಂಗೇಗೌಡನನ್ನು ಕರೆದು ಕೇಳಿದರು, 'ಬಾವಿಯ ನೀರನ್ನು ಬಳಸಲು ನೀವು ಅವನಿಗೆ ಏಕೆ ಅವಕಾಶ ನೀಡಬಾರದು? ನೀವು ಬಾವಿಯನ್ನು ಮಾರಾಟ ಮಾಡಲಿಲ್ಲವೇ?' ಎಂದಾಗ, ರಂಗೇಗೌಡ ತಾನು ಭಾರೀ ಬುದ್ಧಿವಂತನೆಂಬ ಸೊಕ್ಕಿನಿಂದ ಹೇಳಿದ 'ಹೌದು ಮಹಾಸ್ವಾಮಿ, ನಾನು ಬಾವಿಯನ್ನು ಮಾತ್ರ ಈ ರೈತನಿಗೆ ಮಾರಾಟ ಮಾಡಿದ್ದೇನೆ. ಅದರಲ್ಲಿನ ನೀರನ್ನು ನಾನು ಅವನಿಗೆ ಮಾರಾಟ ಮಾಡಿಲ್ಲ. ಆದ್ದರಿಂದ, ನನ್ನ ಆಸ್ತಿಯಾದ ನೀರನ್ನು ತೆಗೆದುಕೊಳ್ಳಲು ಅವನಿಗೆ ಯಾವುದೇ ಹಕ್ಕಿಲ್ಲ. ಈಗ, ಅವನು ನೀರನ್ನು ತೆಗೆದುಕೊಳ್ಳಲು ಬಯಸಿದರೆ, ಅವನು ನೀರನ್ನು ಖರೀದಿಸಲು ಹೆಚ್ಚಿನ ಹಣವನ್ನು ಪಾವತಿಸಬೇಕಾಗುತ್ತದೆ' ಎಂದ.

ಜಿಲ್ಲಾ ನ್ಯಾಯಾಧೀಶರು ರಂಗೇಗೌಡನ ಬುದ್ಧಿವಂತಿಕೆಯ ವಾದವನ್ನು ಕೇಳಿ, ಸ್ವಲ್ಪ ಮುಗುಳ್ನಕ್ಕು ಉತ್ತರಿಸಿದರು. 'ಓಹ್, ನೀವು ಒಳ್ಳೆಯ ಅಂಶವನ್ನು ಹೇಳುತ್ತಿದ್ದೀರಿ. ಸರಿ, ನೀವು ಬಾವಿಯನ್ನು ಈ ಹೊಂಬಾಳೆಗೌಡನಿಗೆ ಮಾರಾಟ ಮಾಡಿದಾಗ ಬಾವಿ ಅವನ ಆಸ್ತಿಯಾಯಿತು. ಮತ್ತು ಬಾವಿಯ ನೀರು ಇನ್ನೂ ನಿಮ್ಮ ಆಸ್ತಿಯಾಗಿದೆ. ಆದ್ದರಿಂದ, ರೈತನ ಬಾವಿಯಲ್ಲಿ ನೀರನ್ನು ಸಂಗ್ರಹಿಸಲು ನಿಮಗೆ ಯಾವುದೇ ಹಕ್ಕಿಲ್ಲ ಅಲ್ವಾ? ಈಗ ನಿಮಗೆ ಕೇವಲ ಎರಡು ಆಯ್ಕೆಗಳಿವೆ. ಒಂದು, ನೀರು ಸಂಗ್ರಹಣೆಗಾಗಿ ಬಾವಿಯನ್ನು ಬಾಡಿಗೆಗೆ ಪಡೆಯಲು ನೀವು ಹೊಂಬಾಳೆಗೌಡನಿಗೆ ಹಣ ಪಾವತಿಸಬೇಕು. ಅದಿಲ್ಲವಾದರೆ, ನೀವು ಬಾವಿಯಿಂದ ಎಲ್ಲಾ ನೀರನ್ನು ತಕ್ಷಣ ತೆಗೆದುಹಾಕಬೇಕು' ಎಂದರು. ರಂಗೇಗೌಡನಿಗೆ ತನ್ನ ಬುದ್ಧಿವಂತಿಕೆಯನ್ನು ಸಮರ್ಥಿಸಿಕೊಳ್ಳಲು ಏನು ಮಾಡಬೇಕೆಂದು ತಿಳಿಯದೆ ದುಃಖದಿಂದ ತಲೆ ಬಾಗಿಸಿದ. ತನ್ನ ಬುದ್ಧಿವಂತಿಕೆಯ ಸೊಕ್ಕಿನಿಂದಲೇ ಅವನಿಗೆ ಹಾನಿಯಾಗಿತ್ತು.

ನೀವು ಎಷ್ಟೇ ಬುದ್ಧಿವಂತರಾಗಿದ್ದರೂ, ನಿಮಗಿಂತ ಹೆಚ್ಚು ಬುದ್ಧಿವಂತರಾದ ಅನೇಕರು ಯಾವಾಗಲೂ ಇರುತ್ತಾರೆ. ಆದ್ದರಿಂದ, ವಿನಮ್ರರಾಗಿರಿ. ಎಲ್ಲಾ ಸಂದರ್ಭದಲ್ಲಿಯೂ ಅನಗತ್ಯವಾಗಿ ಬುದ್ಧಿವಂತಿಕೆಯನ್ನು ಪ್ರದರ್ಶಿಸಲು ಹೋಗಬೇಡಿ!

– ಅಲೆಮಾರಿ.

# ಅತ್ಯಾಚಾರಿಗಳಿಗೆ ಸೂಕ್ತ ಶಿಕ್ಷೆ ಜಾರಿಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ರೋಣ

ಜಿಲ್ಲೆಯಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದ್ದು, ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ ಎಂದು ಕರ್ನಾಟಕ ಜನಪರ ಅಭಿವೃದ್ಧಿ ವೇದಿಕೆ ಮುಖಂಡ ಉಮೇಶ ರಾಠೋಡ ಆರೋಪಿಸಿದರು.

ಅವರು ಬುಧವಾರ ಗಜೇಂದ್ರಗಡ, ನರಗುಂದ ಪಟ್ಟಣಗಳಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಜರುಗಿದ ಅತ್ಯಾಚಾರ ಪ್ರಕರಣಗಳನ್ನು ಖಂಡಿಸಿ, ಘಟನೆಗೆ ಕಾರಣರಾದವರಿಗೆ ಗಲ್ಲು ಶಿಕ್ಷೆಯನ್ನು ವಿಧಿಸಬೇಕು ಎಂದು ಆಗ್ರಹಿಸಿ ತಹಸೀಲ್ದಾರ್ ವಾಣಿ ಉಂಕಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಇಂತಹ ಹೇಯ ಕೃತ್ಯಗಳು ನಡೆಯುತ್ತಿದ್ದರೂ ಸೂಕ್ತ ತನಿಖೆ ಕೈಗೊಂಡು, ತಪ್ಪಿತಸ್ಥರಿಗೆ ಶಿಕ್ಷೆಗೆ ಗುರಿಪಡಿಸಲಾಗುತ್ತಿಲ್ಲ. ಕೂಡಲೇ ಆರೋಪಿಗಳನ್ನು ಬಂಧಿಸಿ ಗಲ್ಲು ಶಿಕ್ಷೆ ವಿಧಿಸಬೇಕು. ಮುಖ್ಯವಾಗಿ ಜಿಲ್ಲೆಯಲ್ಲಿ ಮಹಿಳೆಯರ ರಕ್ಷಣೆಗೆ ಸರಕಾರ ಪ್ರತ್ಯೇಕ ಕೇಂದ್ರಗಳನ್ನು ತೆರೆದು, ಅವರಿಗೆ ಸೂಕ್ತ ಕಾನೂನು ರಕ್ಷಣೆ ಒದಗಿಸಬೇಕು. ಭಾರತವನ್ನು ತಾಯಿ ಎಂದು ಪೂಜಿಸುವ ನಮ್ಮ ನೆಲದಲ್ಲಿ ದುಷ್ಟರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ವಿಧಿಸಿದಾಗ ಮಾತ್ರ ಇಂತಹ ಘಟನೆಗಳು ನಿಲ್ಲಲು ಸಾಧ್ಯ ಎಂದರು.

ರಾಜು ನಾಯಕ, ರಾಜೇಸಾಬ ಪಿಂಜಾರ್, ತ್ರಿಮೂರ್ತಿ ಮಾದರ, ಬಸವರಾಜ ತಳವಾರ, ಶರಣಪ್ಪ ಪವಾಡಶೆಟ್ಟಿ, ರವಿ ಅಂಗಡಿ, ಬಸವರಾಜ ಹಲಗಿ, ರಿಯಾಜ್ ಹುಯಿಲಗೋಳ ಸೇರಿದಂತೆ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಪ್ರವಚನ ಕೇಳುವುದರಿಂದ ಜೀವನ್ಮುಕ್ತಿ ಸಾಧ್ಯ




■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಠ ಮಾನ್ಯಗಳು, ಮತ್ತಿತರ ಪವಿತ್ರ ಕ್ಷೇತ್ರಗಳಲ್ಲಿ ನಡೆಯುವ ಪ್ರವಚನಗಳನ್ನು ಕೇಳುವದರಿಂದ ಜೀವನ್ಮುಕ್ತಿ ದೊರಕುತ್ತದೆ. ಪ್ರವಚನಗಳಿಂದ ಮನಸ್ಸು ಪ್ರಫುಲ್ಲಿತವಾಗಿ ಭಗವಂತನ ಕಡೆಗೆ ಮನಸ್ಸು ಹೋಗುತ್ತದೆ. ಭಗವಂತನನ್ನು ಭಕ್ತಿಯಿಂದ ಪೂಜಿಸಿದಾಗ ಮುಕ್ತಿ ತಾನೇ ತಾನಾಗಿ ದೊರಕುತ್ತದೆ ಎಂದು ರೋಣ ಗುಲಗಂಜಿ ಮಠದ ಶ್ರೀ ಗುರುಪಾದೇಶ್ವರ ಮಹಾಸ್ವಾಮಿಗಳವರು ಹೇಳಿದರು.

ಸಮೀಪದ ಅಬ್ಬಿಗೇರಿಯ ಹಿರೇಮಠದಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ಪ್ರವಚನಗಳು ಮನದ ಮಲಿನಗಳನ್ನು ತೊಳೆಯಲು ಸಹಾಯಕವಾಗಿವೆ. ಈ ಭಾಗದಲ್ಲಿ ನರೇಗಲ್ಲ ಹಿರೇಮಠದ ಶ್ರೀ ಮಲ್ಲಿಕಾರ್ಜುನ ಶ್ರೀಗಳವರು ಪ್ರವಚನ ಪ್ರವೀಣರೆಂದು ಹೆಸರುವಾಸಿಯಾಗಿದ್ದಾರೆ. ಈಗ ಮತ್ತೆ ಅವರ ಪ್ರವಚನ ಕೇಳುವ ಭಾಗ್ಯ ನಿಮಗೆ ಒದಗಿ ಬಂದಿರುವುದು ನಿಮ್ಮೆಲ್ಲರ ಭಕ್ತಿಯ ದ್ಯೋತಕವಾಗಿದೆ ಎಂದರು. ಮಹಾತ್ಮರನ್ನು ನೆನೆಯುವುದೇ ಪ್ರವಚನದ ಸಾರವಾಗಿದೆ. ಇವುಗಳನ್ನು ಕೇಳಿ ನೀವು ಸ್ವಾರ್ಥತೆಯನ್ನು ತೊರೆದು, ನಿಸ್ವಾರ್ಥತೆಯಿಂದ ಬದುಕಲು ಕಲಿತರೆ ಅದೇ ನೀವು ಪ್ರವಚನದ ಶ್ರೀಗಳಿಗೆ ಕೊಡುವ ದೊಡ್ಡ ಕಾಣಿಕೆಯಾಗುತ್ತದೆ ಎಂದು ಶ್ರೀಗಳು ಹೇಳಿದರು.

ಈ ಸಂದರ್ಭದಲ್ಲಿ ಷಣ್ಮುಖ ಸ್ವಾಮಿಗಳು, ಎಂ.ಎ ಹಿರೇವಡೆಯರ, ಸೋಮನಗೌಡ ಕಣವಿ, ಮುತ್ತಪ್ಪ ಕುಕನೂರ, ಶಂಕ್ರಣ್ಣ ಮಾಳಶೆಟ್ಟಿ, ಭರಮಪ್ಪ ಹನುಮನಾಳ, ಕುಮಾರ ಭೀಮನಗೌಡ್ರ, ಮಹಾಂತಯ್ಯ ಗುರುವಡೆಯರ, ಮಲ್ಲಯ್ಯ ಹಿರೇಮಠ, ಶೇಖಣ್ಣ ಕಾಳಗಿ, ಶೇಖಪ್ಪ ಕುಕನೂರ,ಬಸವರಾಜ ಹರದಾರಿ, ಮಹೇಶ ಹೊಂಬಳ್ಳಿ ಮುಂತಾದವರಿದ್ದರು. ಬಸಲಿಂಗಯ್ಯ ಶಾಸ್ತ್ರಿಗಳಿಂದ ವೇದಘೋಷ ಜರುಗಿತು. ಡಾ. ಆರ್.ಕೆ ಗಚ್ಚಿನಮಠ ಸ್ವಾಗತಿಸಿದರು. ಅಂದಪ್ಪ ವೀರಾಪೂರ ನಿರೂಪಿಸಿದರು.

# ಬೆರಳಚ್ಚು, ಕಂಪ್ಯೂಟರ್ ಪರೀಕ್ಷೆಯಲ್ಲಿ ಸಾಧನೆ



■ ವಿಜಯಸಾಕ್ಷಿ ಸುದ್ದಿ, ಗದಗ

ಜುಲೈ ತಿಂಗಳಲ್ಲಿ ನಡೆದ ಬೆರಳಚ್ಚು ಮತ್ತು ಕಂಪ್ಯೂಟರ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಸಿದ್ದಲಿಂಗನಗರದ ರಾಜ್ ವಾಣಿಜ್ಯ ಮತ್ತು ಕಂಪ್ಯೂಟರ್ ಶಿಕ್ಷಣ ಸಂಸ್ಥೆಯ ಫಲಿತಾಂಶ ಶೇ.100ರಷ್ಟಾಗಿದೆ.

ಬೆರಳಚ್ಚು ಪ್ರೌಢದರ್ಜೆಯಲ್ಲಿ ಸಬೀನಾ ಬಿ. ಮಣ್ಣಿಕೇರಿ ಪ್ರಥಮ(72.5%), ಜೈಬುನಬಿ ಸರ್ವರೆ ದ್ವಿತೀಯ, ಬೆರಳಚ್ಚು ಕನ್ನಡ ಪ್ರಥಮ ದರ್ಜೆಯಲ್ಲಿ ಸುಷ್ಮಾ ಎಸ್. ಪಾಟೀಲ ಪ್ರಥಮ(83.50%), ಸಬೀನಾಬಾನು ಎ.ನವಲಗುಂದ ದ್ವಿತೀಯ(81.50%) ಹಾಗೂ ಆಂಗ್ಲ ಬೆರಳಚ್ಚು ಪ್ರಥಮ ದರ್ಜೆಯಲ್ಲಿ ಸಮ್ರೀನಾಬಾನು ಎಸ್.ನಾಶಿಪುಡಿ ಪ್ರಥಮ(87.00%), ಸಬೀನಾಬಾನು ಎ.ನವಲಗುಂದ ದ್ವಿತೀಯ (82.00%) ಪಡೆದಿದ್ದಾರೆ.

ಕಂಪ್ಯೂಟರ್ ಆಫೀಸ್ ಅಟೋಮೇಶನ್ ವಿಭಾಗದಲ್ಲಿ ಪವಿತ್ರಾ ಪಿ.ಅಂಗಡಿ ಪ್ರಥಮ(89.5%), ರಕ್ಷಿತಾ ಎಸ್. ಮೇಟಿ ದ್ವಿತೀಯ (88.5%) ಮತ್ತು ವೈಷ್ಣವಿ ಎಸ್.ಮುನವಳ್ಳಿ ತೃತೀಯ(86.5%) ಸ್ಥಾನದೊಂದಿಗೆ ಉತ್ತೀರ್ಣರಾಗಿದ್ದಾರೆ.

ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳನ್ನು ಪ್ರಾಚಾರ್ಯೆ ಸತ್ಯಶೀಲಾ ಕೆ.ಬಡಿಗೇರ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# 'ಸ್ವಚ್ಛತಾ ಹಿ ಸೇವಾ' ಅಭಿಯಾನ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸೆಪ್ಟೆಂಬರ್ 15ರಿಂದ ಅಕ್ಟೋಬರ್ 2ರವರೆಗೆ 'ಸ್ವಚ್ಛತಾ ಹಿ ಸೇವಾ' ಅಭಿಯಾನದಡಿ ಐತಿಹಾಸಿಕ, ಪಾರಂಪರಿಕ ತಾಣಗಳು, ದೇವಸ್ಥಾನಗಳು ಸೇರಿ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಮಾಡಲಾಗುತ್ತಿದ್ದು, ಇದಕ್ಕೆ ಸಾರ್ವಜನಿಕರ ಸಹಭಾಗಿತ್ವವೂ ಅವಶ್ಯವಾಗಿದೆ ಎಂದು ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಹೇಳಿದರು.

ಅವರು ಮಂಗಳವಾರ ಪಟ್ಟಣದ ಸೋಮೇಶ್ವರ ದೇವಸ್ಥಾನ, ಜೈನ್ ಬಸದಿ, ಲಕ್ಷ್ಮೀ ಲಿಂಗನ ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡು ಮಾತನಾಡಿ, ದೇವಸ್ಥಾನ, ಸ್ಮಾರಕ, ನದಿಪಾತ್ರ, ಅರಣ್ಯ, ಕೆರೆ, ಉದ್ಯಾನ, ನಿಲ್ದಾಣಗಳು ಸಾರ್ವಜನಿಕರ ಸಂಪತ್ತುಗಳಾಗಿವೆ. ಈ ಸ್ಥಳದಲ್ಲಿ ಸ್ವಚ್ಛತೆ, ಶುಚಿತ್ವ ಕಾಪಾಡುವುದು ಎಲ್ಲರ ಕರ್ತವ್ಯವಾಗಿದೆ. ಸ್ವಚ್ಛತೆ ನಿರ್ಲಕ್ಷಿಸಿದರೆ ಭವಿಷ್ಯದಲ್ಲಿ ದುಷ್ಪರಿಣಾಮ ಎದುರಿಸಬೇಕಾಗುತ್ತದೆ. ಸೆ.15ರಿಂದ ಪ್ರಮುಖ ಪ್ರದೇಶಗಳನ್ನು ಸ್ವಚ್ಛಗೊಳಿಸಿ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಮ್ಯಾನೇಜರ್ ಮಂಜುಳಾ ಹೂಗಾರ, ಪರಿಸರ ಅಭಿಯಂತರ ಮಂಜುನಾಥ ಮುದಗಲ್, ಸಿಬ್ಬಂದಿ ಹನಮಂತ ನಂದೆಣ್ಣವರ ಸೇರಿದಂತೆ ಸಿಬ್ಬಂದಿಗಳು, ಪೌರ ಕಾರ್ಮಿಕರು ಇದ್ದರು.

# ಆರೋಗ್ಯದ ಬಗ್ಗೆ ಹೆಚ್ಚು ಗಮನ ನೀಡಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸಾರ್ವಜನಿಕರು ಆರೋಗ್ಯದ ಕಡೆಗೆ ಹೆಚ್ಚು ಒತ್ತು ನೀಡಬೇಕು ಎಂದು ಡಾ. ಎಸ್.ಆರ್ ಮಡಿವಾಳರ ಹೇಳಿದರು.

ಅವರು ಸಮೀಪದ ಸೊರಟೂರ ಗ್ರಾಮದ ಆರೋಗ್ಯ ಕ್ಷೇಮ ಕೇಂದ್ರದಲ್ಲಿ 'ಆಯುಷ್ಮಾನ್ ಭವ' ಆಯುಷ್ ಆರೋಗ್ಯ ಮೇಳ ಉದ್ಘಾಟಿಸಿ ಮಾತನಾಡಿ, ನಮ್ಮ ಆರೋಗ್ಯ ನಮ್ಮ ಕೈಯಲ್ಲಿದ್ದು, ನಾವೆಲ್ಲರೂ ಪ್ರತಿನಿತ್ಯ ಯೋಗ, ಧ್ಯಾನ, ಪರಿಸರ ಸ್ವಚ್ಛತೆ, ಉತ್ತಮ ಪೌಷ್ಟಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ ಹೊಂದಲು ಸಹಕಾರಿಯಾಗುತ್ತದೆ ಎಂದರು. ಗ್ರಾ.ಪಂ ಅಧ್ಯಕ್ಷ ಜಯಮ್ಮಾ ಬಂಕಾಪೂರ, ಯೋಗ ಶಿಕ್ಷಕ ಹೊನ್ನಕೇರಪ್ಪ ಗಾರವಾಡ, ಕಣವಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅರುಣಪ್ರಸಾದ, ಗಂಗಮ್ಮಾ ತಳವಾರ, ಗ್ರಾ.ಪಂ ಉಪಾಧ್ಯಕ್ಷ ನೀಲಗಿರಿಯಪ್ಪ ಪಾಟೀಲ್, ಮರಿಯಪ್ಪ ಸಣ್ಣತಂಗಿಯವರ, ಪಿಡಿಓ ಮಾಲತೇಶ ಮೇವುಂಡಿ, ಲಲಿತಾ ಮಾಯಪ್ಪನವರ, ಪರಶುರಾಮ ಹೂಗಾರ, ವೀಣಾ ಮಡ್ಡಿಕರ ಹಾಗೂ ಆಶಾ ಕಾರ್ಯಕರ್ತೆಯರು ಇದ್ದರು.



### ಪ.ಜಾತಿ ಉಪ ಯೋಜನೆಯಡಿ ಕೃಷಿ ಪರಿಕರಗಳ ವಿತರಣೆ, ತರಬೇತಿ ಕಾರ್ಯಕ್ರಮ

# ಗೋಡಂಬಿ ಬೆಳೆಯಿಂದ ರೈತರಿಗೆ ಅಧಿಕ ಲಾಭ



ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ನಿರ್ದೇಶನಾಲಯದ ವಿಜ್ಞಾನಿ ಡಾ. ಮಂಜೇಶ ಜಿ.ಎನ್ ಮಾತನಾಡಿ, ಗೋಡಂಬಿ ಬೆಳೆಯನ್ನು ಗದಗ ಜಿಲ್ಲೆಯಲ್ಲಿ ವಿಸ್ತರಿಸುವಲ್ಲಿ ಕೆ.ಎಚ್ ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯ ಪಾತ್ರ ಅಪಾರವಾಗಿದೆ. ಈ ಬೆಳೆಯಿಂದ ರೈತರು ಅಧಿಕ ಲಾಭವನ್ನು ಪಡೆದು ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ಗೋಡಂಬಿ ಸಂಶೋಧನಾ ನಿರ್ದೇಶನಾಲಯದಿಂದ ವಿವಿಧ ಕೃಷಿ ಪರಿಕರಗಳಾದ ತಾಡಪತ್ರಿ, ತರಕಾರಿ ಬೀಜ, ತರಕಾರಿ ಸ್ಪೆಷಲ್(ಲಘು ಪೋಷಕಾಂಶಗಳ ಮಿಶ್ರಣ) ನೀಡಲಾಗುತ್ತಿದ್ದು, ಇವುಗಳನ್ನು ತಾವೆಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಗೋಡಂಬಿ ಸಂಶೋಧನಾ ನಿರ್ದೇಶನಾಲಯದ ಸಸ್ಯ ರೋಗ ಶಾಸ್ತ್ರ ವಿಜ್ಞಾನಿ ಡಾ. ರಾಜಶೇಖರ ಎಚ್ ತಿಳಿಸಿದರು.

ಐಸಿಎಆರ್–ಕೆ.ಎಚ್ ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಗೋಡಂಬಿ ಸಂಶೋಧನಾ ನಿರ್ದೇಶನಾಲಯ, ಪುತ್ತೂರು ಇವರ ಸಂಯುಕ್ತ ಆಶ್ರಯದಲ್ಲಿ ಹುಲಕೋಟಿಯಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಅಡಿ ರೈತರಿಗೆ ಕೃಷಿ ಪರಿಕರಗಳ ವಿತರಣೆ ಹಾಗೂ ಗೋಡಂಬಿ ಉತ್ಪಾದನಾ ತಾಂತ್ರಿಕತೆ ಕುರಿತು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೋಡಂಬಿ ಸಂಶೋಧನಾ ನಿರ್ದೇಶನಾಲಯವು ತಳಿಗಳ ಅಭಿವೃದ್ಧಿ, ಗೋಡಂಬಿ ತೋಟಗಳ ನಿರ್ವಹಣೆ, ಕೀಟ ರೋಗಗಳ ನಿರ್ವಹಣೆ, ಗೋಡಂಬಿ ಮೌಲ್ಯವರ್ಧನೆ ಮತ್ತು ಉದ್ಯಮಶೀಲತೆಯನ್ನು ಸ್ಥಾಪಿಸುವಲ್ಲಿ ರೈತರಿಗೆ ಪೂರಕವಾಗಿದೆ. ರೈತರು ತಮ್ಮ ಜಮೀನಿನಲ್ಲಿ ಮಸಾರಿ ಮಣ್ಣಿನಲ್ಲಿ ಗೋಡಂಬಿ ಬೆಳೆಯನ್ನು ಬೆಳೆಯಲು ಇಚ್ಛಿಸಿದಲ್ಲಿ ಗೋಡಂಬಿ ಸಂಶೋಧನಾ ನಿರ್ದೇಶನಾಲಯದಿಂದ ಅಭಿವೃದ್ಧಿಪಡಿಸಿರುವ ಹೊಸ ತಳಿಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿ ಡಾ. ವೀಣಾ ಜಿ.ಎಲ್ ಮಾತನಾಡಿ, ರೈತರು ಗೋಡಂಬಿಯನ್ನು ಮಾತ್ರ ಮಾರಾಟ ಮಾಡುತ್ತಿದ್ದು, ಗೋಡಂಬಿ ಜೊತೆಗೆ ಹಣ್ಣಿನಿಂದ ಸಾಕಷ್ಟು ಮೌಲ್ಯವರ್ಧನೆ ಪದಾರ್ಥಗಳನ್ನು ಮಾಡಿ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಸುಧಾ ಮಂಕಣಿ, ಕೃಷಿ ಪರಿಕರಗಳ ಜೊತೆಗೆ ತರಕಾರಿ ಬೀಜಗಳನ್ನು ಕೂಡಾ ನೀಡುತ್ತಿರುವುದರಿಂದ ಪೌಷ್ಟಿಕ ತೋಟ ಮಾಡಿ ದಿನ ನಿತ್ಯ ತಾಜಾ ತರಕಾರಿಗಳು ಹಾಗೂ ರಾಸಾಯನಿಕ ಮುಕ್ತ ತರಕಾರಿಗಳನ್ನು ಸೇವಿಸಿರಿ ಎಂದು ಕರೆ ನೀಡಿದರು.

ಹೇಮಾವತಿ ಹಿರೇಗೌಡರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ವಿನಾಯಕ ನಿರಂಜನ ಕಾರ್ಯಕ್ರಮ ನಿರೂಪಿಸಿದರು. ನಾರಾಯಣ ಭಂಡಿ ವಂದಿಸಿದರು. ಕಾರ್ಯಕ್ರಮದಲ್ಲಿ 100 ಪರಿಶಿಷ್ಟ ಜಾತಿ ರೈತರಿಗೆ ಕೃಷಿ ಪರಿಕರಗಳನ್ನು ವಿತರಿಸಲಾಯಿತು.

### ರೋಟರಿ ಕ್ಲಬ್ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸಾ ಶಿಬಿರ

# ಜಾಗರೂಕತೆಯಿಂದ ಕಣ್ಣಿನ ರಕ್ಷಣೆ ಮಾಡಿಕೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ವೃದ್ಧಾಪ್ಯದಲ್ಲಿ ಅಥವಾ ಇಳಿ ವಯೋಮಾನದಲ್ಲಿ ಕಣ್ಣಿಗೆ ಪೊರೆ ಬರುವದು ಸಹಜ. ಆದರೆ,

ಬಡತನದಿಂದಾಗಿ ವೃದ್ಧರನ್ನು ಕಡೆಗಣಿಸಲಾಗುತ್ತಿದ್ದು, ಇಳಿವಯಸ್ಸಿನಲ್ಲೂ ಅಂಧತ್ವ ಬರದಂತೆ ನೋಡಿಕೊಳ್ಳಲು ಸಂಘ–ಸಂಸ್ಥೆಗಳಿಂದ ಉಚಿತ ನೇತ್ರ ತಪಾಸಣಾ ಶಿಬಿರಗಳು ನೆರವಾಗಲಿವೆ ಎಂದು ರೋಟರಿ ಸಂಘದ ಅಧ್ಯಕ್ಷ ಸುರೇಶ ರಂಗ್ರೇಜ ಹೇಳಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಣ್ಣು ಮಾನವನ ದೇಹದ ಸೂಕ್ಷ್ಮ ಅಂಗವಾಗಿದ್ದು, ಅತೀ ಜಾಗರೂಕತೆಯಿಂದ ಕಣ್ಣಿನ ರಕ್ಷಣೆ ಮಾಡಿಕೊಳ್ಳಬೇಕಿದೆ. ಹವಾಮಾನ ವೈಪರಿತ್ಯ ಮತ್ತು ಕಲುಷಿತ ವಾತವರಣವು ಮನುಷ್ಯನ ಕಣ್ಣುಗಳಿಗೆ ಅಪಾಯವನ್ನು ತಂದಿಡುವ ಸಾಧ್ಯತೆಯಿದೆ.

ಹೀಗಾಗಿ ಕಣ್ಣಿನ ಸಮಸ್ಯೆ ಹಾಗೂ ಕಣ್ಣಿನ ಪೊರೆ ಬಂದು ಸಮಸ್ಯೆಗೆ ಸಿಲುಕಿದ ಜನತೆಗೆ ನೆರವಾಗಬೇಕು ಎಂಬ ಉದ್ದೇಶದಿಂದ ರೋಟರಿ ಕ್ಲಬ್‌ನಿಂದ ಹುಬ್ಬಳ್ಳಿಯ ಎಂ.ಎಂ ಜೋಶಿ ಆಸ್ಪತ್ರೆ ಹಾಗೂ ಗಜೇಂದ್ರಗಡ ಸರ್ಕಾರಿ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆ ಚಿಕಿತ್ಸಾ ಶಿಬಿರದಲ್ಲಿ 300ಕ್ಕೂ ಅಧಿಕ ಸಂಖ್ಯೆಯಲ್ಲಿ ಜನತೆ ಪಾಲ್ಗೊಂಡಿದ್ದು ಖುಷಿ ತಂದಿದೆ. ಮುಂದಿನ ದಿನಗಳಲ್ಲಿ ಇಂತಹ ಮತ್ತಷ್ಟು ಸಾಮಾಜಿಕ ಕಾರ್ಯಗಳನ್ನು ರೋಟರಿ ಕ್ಲಬ್ ಆಯೋಜಿಸಲಿದೆ ಎಂದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್‌ನಿಂದ ನಡೆದ ಉಚಿತ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರದಲ್ಲಿ 400 ಜನರು ಕಣ್ಣಿ ತಪಾಸಣೆ ಮಾಡಿಸಿಕೊಂಡಿದ್ದು, ಕಣ್ಣಿನ ಪೊರೆ ಚಿಕಿತ್ಸೆಗೆ ಒಳಪಟ್ಟ 99 ಶಿಬಿರಾರ್ಥಿಗಳ ಆಧಾರ್ ಕಾರ್ಡ್ ಮತ್ತು ಬಿಪಿಎಲ್ ಕಾರ್ಡ್‌ಗಳ ಮೂಲಕ ಹುಬ್ಬಳ್ಳಿಯ ಎಂ.ಎಂ ಜೋಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗವುದು ಎಂದು ಸಂಘಟಕರು ತಿಳಿಸಿದರು.

ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ, ವಕೀಲ ಆರ್.ಎಂ ರಾಯಬಾಗಿ ಮಾತನಾಡಿ, ಜನತೆ ಕಣ್ಣಿನ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ತೋರಬಾರದು. ಸಮಸ್ಯೆಗಳು ಸಣ್ಣದಿದ್ದಾಗಲೇ ಪರಿಹಾರ ಕಂಡುಕೊಂಡರೆ ಜೀವನದಲ್ಲಿ ಬಾಗಶಃ ಗೆಲುವು ಸಾಧಿಸಿದಂತೆ. ಪಟ್ಟಣದ ರೋಟರಿ ಕ್ಲಬ್ ತಾಲೂಕಿನ ಜನತೆಗೆ ಉಚಿತವಾಗಿ ನೇತ್ರ ತಪಾಸಣೆ ಹಾಗೂ ಕಣ್ಣಿನ ಪೊರೆಯ ಚಿಕಿತ್ಸೆ ಕಾರ್ಯಕ್ರಮವನ್ನು ಆಯೋಜಿಸಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ಗೋವಿಂದ ಮಂತ್ರಿ, ಲಕ್ಷ್ಮಣ ರಂಗ್ರೇಜ, ಗಣೇಶ ರಾಯಬಾಗಿ, ರೀತು ಮೆಹರವಾಡೆ, ಮಂಜುನಾಥ ಯರಗೇರಿ, ಬಾಬು ನಾವಡೆ, ರಮೇಶ ಮರಾಠಿ ಮುಂತಾದವರಿದ್ದರು.



ರೋಣ ಪಟ್ಟಣದಲ್ಲಿ ಗುರುವಾರ ಹಜರತ್ ಮುಹ್ಮದ್ ಪೈಗಂಬರರವರ ಜನ್ಮ ದಿನೋತ್ಸವದ ಪ್ರಯುಕ್ತ ಪಟ್ಟಣದ ವಿವಿಧೆಡೆಯಲ್ಲಿ ಮುಸ್ಲಿಂ ಬಾಂಧವರು ಅನ್ನ ಸಂತರ್ಪಣೆ ಕಾರ್ಯ ನೆರವೇರಿಸಿದರು. ಇದಕ್ಕೂ ಮೊದಲು ಹಬ್ಬದ ನಿಮಿತ್ತ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿ, ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.



**ಗದಗ:** ಹಾಳದಿಬ್ಬ ಗಜಾನನ ಸಮಿತಿಯಿಂದ ನಗರಸಭೆ ಮಾಜಿ ಅಧ್ಯಕ್ಷ ಪೀರಸಾಬ ಕೌತಾಳ, ಎಸ್‌ಎಸ್‌ಕೆ ಸಮಾಜ ಪಂಚ್ ಕಮಿಟಿಯ ಅಧ್ಯಕ್ಷ ಫಕೀರಸಾ ಭಾಂಡಗೆ, ಗೌರವ ಕಾರ್ಯದರ್ಶಿ ವಿನೋದ ಆರ್ ಶಿದ್ಲಿಂಗ್, ಹಾಗೂ ಪಂಚರಾದ ವಿಷ್ಣು ಎಂ ಶಿದ್ಲಿಂಗ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆಯ 25ನೇ ವಾರ್ಡ್ ಸದಸ್ಯರಾದ ವಿನಾಯಕ ಮಾನ್ವಿ ಸೇರಿದಂತೆ ಹನಮಂತಗೌಡ ದೇಸಾಯಿ, ವಿರೂಪಾಕ್ಷಗೌಡ ದೇಸಾಯಿಗೌಡ, ಉಮೇಶ್‌ಗೌಡ, ರವಿ ಶಿದ್ಲಿಂಗ್, ಬಾಬು ಶಿದ್ಲಿಂಗ್, ವಾಸುದೇವ್. ವಿಶಾಲ್ ಶಿದ್ಲಿಂಗ್, ಪ್ರಮೋದ್ ಶಿದ್ಲಿಂಗ್, ಲಖನ್ ಶಿದ್ಲಿಂಗ್ ಇದ್ದರು.

### ಗುಂಪು ಆಟದ ಕ್ರೀಡಾಕೂಟದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ

# ಪ್ರತಿ ಶಾಸಕರ ಕ್ಷೇತ್ರಕ್ಕೆ ಮೂರು ಕೆಪಿಎಸ್ ಶಾಲೆ

■ ವಿಜಯಸಾಕ್ಷಿ ಸುದ್ದಿ, ಚಿಕ್ಕಮಂಗಳೂರು

ರಾಜ್ಯದ ಪ್ರತಿ ಶಾಸಕರ ಕ್ಷೇತ್ರಕ್ಕೆ ತಲಾ ಮೂರು ಕೆಪಿಎಸ್ ಶಾಲೆಗಳನ್ನು ಮಂಜೂರು ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ತರೀಕೆರೆ ತಾಲೂಕಿನ ಬಾವಿಕೆರೆಯಲ್ಲಿ ಗುರುವಾರ ನಡೆದ ಜಿಲ್ಲಾ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಗುಂಪು ಆಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರಿಯಾಗಿ ಓದಿ ಉತ್ತೀರ್ಣರಾಗಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ತಾವು ಈ ಬಾರಿ ಒಂದೇ ಕೆಪಿಎಸ್ ಶಾಲೆಗಳನ್ನು ತೆರೆಯುವುದರಿಂದ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚುತ್ತದೆ ಜೊತೆಗೆ ಶಿಕ್ಷಕರ ಕೊರತೆ ನೀಗುತ್ತದೆ ಎಂದು ತಿಳಿಸಿದರು.

ವರ್ಷದಲ್ಲಿ ಮೂರು ಬಾರಿ ಬೋರ್ಡ್ ಎಕ್ಸಾಮ್ ನಡೆಸಿರುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.



ತಾವು ಒಂದೇ ವರ್ಷದಲ್ಲಿ ಮೂರು ಬಾರಿ ಬೋರ್ಡ್ ಎಕ್ಸಾಮ್ ನಡೆಸಿದ್ದರಿಂದಾಗಿ ಫೇಲಾದ ವಿದ್ಯಾರ್ಥಿಗಳಿಗೆ ಒಂದು ವರ್ಷ ವೇಸ್ಟ್ ಆಗುವುದು ತಪ್ಪಿತು. ರಾಜ್ಯದ 42 ಸಾವಿರ ವಿದ್ಯಾರ್ಥಿಗಳಿಗೆ ಆ ವರ್ಷದಲ್ಲೇ ಮತ್ತೆ ಪರೀಕ್ಷೆ ಎದುರಿಸಿ ಪಾಸ್ ಆಗಲು ಸಾಧ್ಯವಾಯಿತು ಎಂದರು.

ಮುಂದಿನ ವರ್ಷ ಎಸ್ ಎಸ್ ಎಲ್ ಸಿ ಗೂ ವರ್ಷದಲ್ಲಿ ಮೂರು ಬಾರಿ ಬೋರ್ಡ್ ಎಕ್ಸಾಮ್ ನಡೆಸಲಾಗುವುದು ಎಂದು ಹೇಳಿದರು.

ಈ ಹಿಂದೆ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಒಂದು ಮೊಟ್ಟೆ ನೀಡಲಾಗುತ್ತಿತ್ತು , ತಾವು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಕ್ಕಳ ಪರಿಸ್ಥಿತಿಯನ್ನು ಮನವರಿಕೆ ಮಾಡಿ ಈಗ ಎರಡು ಮೊಟ್ಟೆ ನೀಡುವ ಕೆಲಸ ಆರಂಭಿಸಿದ್ದೇವೆ ಎಂದರು.

ಒಂದೇ ವರ್ಷದಲ್ಲಿ ಮೂರು ಬಾರಿ ಬೋರ್ಡ್ ಎಕ್ಸಾಮ್ ನಡೆಸಿರುವುದು ದೇಶದ ಇತಿಹಾಸದಲ್ಲಿ ಇದೇ ಪ್ರಥಮವಾಗಿದೆ ಎಂದ ಸಚಿವ ಮಧು ಬಂಗಾರಪ್ಪ, ಈ ಎಕ್ಸಾಮ್‌ಗಳಲ್ಲಿ ರಾಜ್ಯದ ಒಂದು ಲಕ್ಷದ ಇಪ್ಪತ್ತು ಸಾವಿರ ವಿದ್ಯಾರ್ಥಿಗಳು ಮರು ಪರೀಕ್ಷೆ ಬರೆದಿದ್ದು, ಅದರಲ್ಲಿ 42 ಸಾವಿರ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಆ ಎಲ್ಲಾ ವಿದ್ಯಾರ್ಥಿಗಳು ಇದೇ ವರ್ಷ ಕಾಲೇಜಿಗೆ ದಾಖಲಾಗುತ್ತಾರೆ ಎಂದು ತಿಳಿಸಿದರು.

ಮುಂದಿನ ವರ್ಷದಿಂದ ಮಕ್ಕಳ ಶಾಲಾ ಬ್ಯಾಗಿನ ಹೊರೆಯನ್ನು ಅರ್ಧದಷ್ಟು ಕಡಿಮೆ ಮಾಡಲಾಗುವುದು, ಆ ದಿನಕ್ಕೆ ಅಗತ್ಯವಿರುವ ಪುಸ್ತಕಗಳನ್ನು ಮಾತ್ರ ತೆಗೆದುಕೊಂಡು ಹೋಗಲು ಅನುವು ಮಾಡಿಕೊಡಲಾಗುವುದು ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಶಿಕ್ಷಣ ಇಲಾಖೆ ಎದುರಿಸುತ್ತಿರುವ ಸಮಸ್ಯೆಗಳು ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಲ್ಲವನ್ನೂ ಬಗೆಹರಿಸಲು ಸಾಧ್ಯವಾಗದಿದ್ದರೂ ಕೆಲವನ್ನಾದರೂ ಖಂಡಿತ ಪರಿಹರಿಸಲಾಗುವುದು ಎಂದ ಅವರು, ಆ ಕಾರ್ಯಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು ತಮ್ಮೊಂದಿಗೆ ಸಹಕರಿಸಬೇಕು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಶ್ರೀನಿವಾಸ್, ತಮ್ಮ ಮನವಿಗೆ ಸ್ಪಂದಿಸಿ ಕ್ರೀಡಾಕೂಟಕ್ಕೆ ಆಗಮಿಸಿದ ಸಚಿವರು ಹಾಗೂ ಕ್ರೀಡಾಕೂಟದ ಯಶಸ್ಸಿಗೆ ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸಿದರು. ಮಾಜಿ ಸಂಸದ ಚಂದ್ರಪ್ಪ ಮಾತನಾಡಿದರು. ತರೀಕೆರೆ ಉಪವಿಭಾಗಾಧಿಕಾರಿ ಕಾಂತರಾಜು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಂಗನಾಥಸ್ವಾಮಿ, ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಅಂತಾರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಬಸವರಾಜ ಹೊರಟ್ಟಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಪಶ್ಚಿಮ ಆಫ್ರಿಕಾ ದೇಶದ ಗಿನಿಯಾ ಕೊಲ್ಲಿಯ ಕರಾವಳಿ ಪ್ರದೇಶದ ಘಾಣಾದಲ್ಲಿ 66ನೇ ಕಾಮನವೆಲ್ತ್ ಪಾರ್ಲಿಮೆಂಟ್ ಸಮ್ಮೇಳನ (ಸಿಪಿಸಿ) ಅಕ್ಟೋಬರ್ 3ರಿಂದ 6ರವರೆಗೆ ನಡೆಯಲಿದೆ. ಕರ್ನಾಟಕದ ಪ್ರತಿನಿಧಿಯಾಗಿ ಸಭಾಪತಿ ಬಸವರಾಜ ಹೊರಟ್ಟಿಯವರು ಭಾಗವಹಿಸಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

ಲೋಕಸಭಾ ಅಧ್ಯಕ್ಷರಾದ ಓಂ ಬಿರ್ಲಾರವರ ನೇತೃತ್ವದಲ್ಲಿ ದೇಶದ ವಿವಿಧ ರಾಜ್ಯಗಳ ಸಭಾಧ್ಯಕ್ಷರು, ಸಭಾಪತಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ವಿಧಾನಮಂಡಲಗಳ, ಲೋಕಸಭೆಗಳ ಪಾತ್ರ ಕುರಿತು ಸುದೀರ್ಘ ಚರ್ಚೆ ನಡೆಯಲಿದೆ.

ಅ.1ರಂದು ಬೆಂಗಳೂರಿನಿಂದ ಹೊರಡಲಿರುವ ಬಸವರಾಜ ಹೊರಟ್ಟಿಯವರು ಘಾಣಾದಲ್ಲಿ ನಡೆಯಲಿರುವ ಮೂರು ದಿನಗಳ



ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ 43 ವರ್ಷಗಳ ಸುದೀರ್ಘ ಅನುಭವದಂತೆ ಪ್ರಜಾಪ್ರಭುತ್ವದ ಮಹತ್ವ, ವಿಧಾನಸಭೆ, ವಿಧಾನ ಪರಿಷತ್ತಿನ ಪಾತ್ರಗಳ ಕುರಿತು ವಿಷಯ ಮಂಡಿಸಲಿದ್ದು, ಲೋಕ ಕಲ್ಯಾಣದಲ್ಲಿ ಜನಪ್ರತಿನಿಧಿಗಳ ಜವಾಬ್ದಾರಿ ಕುರಿತು ಬೆಳಕು ಚೆಲ್ಲಲಿದ್ದಾರೆ. ನಂತರ ಅ.9ರಿಂದ 18ರವರೆಗೆ ಇಟಲಿ, ಸ್ವಿಡ್ಜರ್‌ಲ್ಯಾಂಡ್, ಫ್ರಾನ್ಸ್, ಲಂಡನ್ ದೇಶಗಳಿಗೆ ಭೇಟಿ ನೀಡಿ ಅಧ್ಯಯನ ಪ್ರವಾಸ ಕೈಗೊಂಡು ಅ.19ರಂದು ಬೆಂಗಳೂರಿಗೆ ಹಿಂದಿರುಗಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

## ರೋಗಿಗಳಿಗೆ ಹಣ್ಣು-ಹಾಲು ವಿತರಣೆ

■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಈದ್ ಮಿಲಾದ್ ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಘಟಕದ ಪದಾಧಿಕಾರಿಗಳು ಗುರುವಾರ ಪಟ್ಟಣದ ವಿವಿಧ ಆಸ್ಪತ್ರೆಗಳಿಗೆ ತೆರಳಿ ರೋಗಿಗಳಿಗೆ ಹಣ್ಣು, ಬ್ರೆಡ್, ಹಾಲು ವಿತರಿಸಿದರು.

ಈ ಸಂದರ್ಭದಲ್ಲಿ ಸಂಘದ ಕೆ.ಎಸ್ ಉಸ್ಮಾನ್ ಮಾತನಾಡಿ, ಮುಹ್ಮದ್ ಪೈಗಂಬರ್ ಅವರ ಉತ್ತಮ ಮಾರ್ಗದರ್ಶನದಂತೆ ಪ್ರತಿ ವರ್ಷ ಸಂಘದ ವತಿಯಿಂದ ರೋಗಿಗಳಿಗೆ ಹಣ್ಣು, ಬ್ರೆಡ್, ಹಾಲು ವಿತರಿಸಿ ಅವರಿಗೆ ಉತ್ತಮ ಆರೋಗ್ಯ ಸಂಪತ್ತು ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.

ಸಂಘದ ಜಿಲ್ಲಾ ಖಜಾಂಚಿ ಷರೀಪ ಮಕರಬ್ಬಿ ಮಾತನಾಡಿ, ಕಳೆದ 15 ವರ್ಷಗಳಿಂದ ನಮ್ಮ ಸಂಘ ವಿವಿಧ ರೀತಿಯ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ ಎಂದರು. ಕಾರ್ಯದರ್ಶಿ ಸಲೀಂ, ಖಜಾಂಚಿ ರಫೀಕ್ ಅಹ್ಮದ್, ಹಡಗಲಿಯ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಎಸ್. ಮುಸ್ತಾಪ, ಅರ್ಜುಮುನ್ನಿಸಾ ಬೇಗಂ, ಎನ್.ಇಸ್ಮಾಯಿಲ್ ಸಾಹೇಬ್, ಎಂ.ಯಾಹ್ಯ, ಎಸ್.ಅತವುಲ್ಲಾ, ಪೀರ್ ಸಾಹೇಬ್, ನೂರುಲ್ಲಾ, ನಜೀರ್, ದಾದಪೀರ್ ಪಿ.ಈ, ಅಸ್ಲಾಂಬಾಷ ತೆಲಗಿ, ರುಕ್ಸನಾ, ದಾದಪೀರ್, ಹುಸೇನ್ ಪೀರ್, ಅಬುಸಾಲೇಹ, ಅತಾವುಲ್ಲಾ, ಜಮಾಲ್, ಶಬ್ಬೀರ್.ಕೆ, ಮನ್ಸೂರು ಅಹ್ಮದ್, ಶಿಕ್ಷಕ ಸಂಘದ ಪದಾಧಿಕಾರಿ ಎಂ.ದಾದಾಖಲಂದರ, ಮಹಬೂಬ್ ಬಡಗಿ, ದಾವಲ್ ಸಾಹೇಬ್ ಮುಸ್ತಕ ಅಲಿ, ಅಲ್ಲಾಭಕ್ಷ, ದಾದಾಪೀರ, ಎಸ್.ಶಫಿ ಮುಂತಾದವರಿದ್ದರು.



## ಅ.1ರಂದು ಶ್ರೀಕೃಷ್ಣ ಜಯಂತಿ, ಯಾದವ ಸಮ್ಮೇಳನ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಗೊಲ್ಲವ ಯಾದವ ಸಂಘದ ವತಿಯಿಂದ ಶ್ರೀಕೃಷ್ಣ ಜಯಂತಿ ಹಾಗೂ ಮೊಟ್ಟ ಮೊದಲ ಬಾರಿಗೆ ಜಿಲ್ಲಾ ಯಾದವ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಗೊಲ್ಲವ ಯಾದವ ಸಂಘದ ಅಧ್ಯಕ್ಷ ಹರೀಶ ಪೂಜಾರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಅಕ್ಟೋಬರ್ 1 ರಂದು ಬೆಳಗ್ಗೆ 10.30ಕ್ಕೆ ನಗರದ ಗಾಣಿಗ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಕಾನೂನು ಮತ್ತು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಉದ್ಘಾಟಿಸುವರು.

ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಯಾದವ ಸಮಾಜದ ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ, ಶಾಸಕ ಧೀರಜ ಮುನಿರಾಜು, ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಗದ್ಗುರು ಯಾದವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಇದೇ ಸಂದರ್ಭದಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಯಾದವ ಸಾಧಕ ಶ್ರೀ ಪ್ರಶಸ್ತಿ ಹಾಗೂ ಯುವ ಸಾಧಕರಿಗೆ ಯಾದವ ಯುವರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ವೈ.ಎಸ್. ಹಣಮರ, ಯುವ ಘಟಕದ ಜಿಲ್ಲಾ ಅಧ್ಯಕ್ಷ ಮಣಿಕಂಠ ಭಂಡಾರಿ, ಅಶೋಕ ಗಾಂಜಿ, ಸಂದೀಪ ಯಾದವ ಉಪಸ್ಥಿತರಿದ್ದರು.

## ಕೆರೆ ಏರಿಯಿಂದ ಕೆಳಗೆ ಜಾರಿದ ಬಸ್: ಪ್ರಯಾಣಿಕರು ಪಾರು



■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತಾಲೂಕಿನ ಅಲಮರಸಿಕೇರೆ ಗ್ರಾಮದ ಕೆರೆ ಏರಿಯಿಂದ ಸಾರಿಗೆ ಬಸ್ ಒಂದು ಕೆಳಕ್ಕಿಳಿದಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ಅನಾಹುತ ತಪ್ಪಿದ ಘಟನೆ ಮಂಗಳವಾರ ಜರುಗಿದೆ.

ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ಹರಪನಹಳ್ಳಿ ಘಟಕದ ಸಾರಿಗೆ ಬಸ್ ಅಲಮರಸಿಕೇರಿ ಮಾರ್ಗವಾಗಿ ಶಾಲಾ-ಕಾಲೇಜ್ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರನ್ನು ತುಂಬಿಕೊಂಡು ಹರಪನಹಳ್ಳಿ ಕಡೆ ಸಾಗುತ್ತಿದ್ದಾಗ ಗ್ರಾಮದ ಕೆರೆ ಏರಿಯ ತಿರುವಿನಲ್ಲಿ ಚಾಲಕ ನಿಯಂತ್ರಣ ತಪ್ಪಿ ಕೆರೆ ಏರಿಯಿಂದ ಕೆಳಗೆ ಇಳಿದಿದೆ. ಕೂಡಲೇ ಸಮಯ ಪ್ರಜ್ಞೆಯಿಂದ ಚಾಲಕ ಮೌನೇಶ್ ಬಸ್‌ನ್ನು ನಿಲ್ಲಿಸಿದ್ದಾರೆ. ವಿದ್ಯಾರ್ಥಿಗಳು ಸೇರಿದಂತೆ 40ಕ್ಕೂ ಹೆಚ್ಚು ಪ್ರಯಾಣಿಕರನ್ನು ಬಸ್‌ನಿಂದ ಕೆಳಗೆ ಇಳಿಸಿ ದೊಡ್ಡ ಅನಾಹುತದಿಂದ ಎಲ್ಲರನ್ನೂ ಪಾರು ಮಾಡಿದ್ದಾರೆ ಎಂದು ಪ್ರಯಾಣಿಕರು ತಿಳಿಸಿದ್ದಾರೆ.

ಅವೈಜ್ಞಾನಿಕವಾಗಿ ಡಾಂಬರ್ ರಸ್ತೆ ಹಾಗೂ ಕೆರೆಯ ಏರಿಗೆ ತಡೆಗೋಡೆ ನಿರ್ಮಾಣ ಮಾಡದಿರುವ ಕಾರಣ ಈ ರೀತಿಯ ಅವಘಡಕ್ಕೆ ಕಾರಣವಾಗುತ್ತಿದೆ. ಗುತ್ತಿಗೆದಾರ ತಡೆಗೋಡೆ ನಿರ್ಮಿಸಲು ಗುತ್ತಿಗೆ ಪಡೆದಿದ್ದು, ತಡೆಗೋಡೆ ಕಾಮಗಾರಿ ಕೈಗೊಳ್ಳದೆ ಹಣ ಲೂಟಿ ಮಾಡಿದ್ದಾರೆ ಎಂದು ಗ್ರಾಮದ ಮುಖಂಡ ಕೋಟೆಪ್ಪ ಆರೋಪಿಸಿದ್ದಾರೆ.

## ಗುರುಗಳ ಗುಣಗಾನವೇ ಈದ್ ಮಿಲಾದ್ ಉದ್ದೇಶ

▸▸ ಮೊದಲನೇ ಪುಟದಿಂದ

ದ್ವೇಷವನ್ನು ಬಿಟ್ಟು ಪ್ರೀತಿ, ಭ್ರಾತೃತ್ವದಿಂದ ಬಾಳಿ, ಪೈಗಂಬರರ ಸಂದೇಶಕ್ಕೆ ಬೆಲೆ ಕೊಡಬೇಕಾಗಿದೆ ಎಂದರು. ಗ್ರಾ.ಪಂ ಅಧ್ಯಕ್ಷ ಕೆ.ಎಸ್ ಪೂಜಾರ, ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸದಸ್ಯರಾದ ಬಸವರಾಜ ಯಲಿಶಿರುಂಜ, ಪೀರಸಾಬ ನದಾಫ, ಮಹಾಂತೇಶ ಕಮತರ, ರಮೇಶ ಭಾವಿ, ಅನ್ನಪೂರ್ಣ ರಿತ್ತಿ, ಫಕ್ಕೀರವ್ವ ಬೇಲೇರಿ, ರಜೀಯಾ ತಹಸೀಲ್ದಾರ, ಅಮೀನಾಬಿ ಹುಬ್ಬಳ್ಳಿ, ಚಂದ್ರವ್ವ ರಿತ್ತಿ, ತಾ.ಪಂ ಮಾಜಿ ಅಧ್ಯಕ್ಷ ಎಂ.ಎನ್ ಉಮಚಗಿ, ಅಂಜುಮನ್ ಕಮಿಟಿಯ ಮಾಜಿ ಅಧ್ಯಕ್ಷ ಎನ್.ಐ ಕಿರಟಗೇರಿ, ವೀರಯ್ಯ ಗಂಧದ, ಹನುಮಂತಪ್ಪ ವಿಠೋಜಿ, ದಾದಾ ಕೊರ್ಲ್ಲಹಳ್ಳಿ, ಹುಸೇನಸಾಬ ನದಾಫ, ಯಮನೂರಸಾಬ ನದಾಫ, ಖಾಜಿಸಾಬ ಮುಲ್ಲಾ ಉಪಸ್ಥಿತರಿದ್ದರು.

### ಸ್ವಚ್ಛತಾ ಅಭಿಯಾನದಡಿ ಗ್ರಾ.ಪಂ ಸದಸ್ಯರಿಂದ ಲಕ್ಕುಂಡಿ ಕಲ್ಯಾಣಿಗಳ ಸ್ವಚ್ಛತೆ

## ಕಲ್ಯಾಣಿಗಳ ಸ್ವಚ್ಛತೆಯಲ್ಲಿ ಗ್ರಾಮಸ್ಥರ ಸಹಕಾರ ಅಗತ್ಯ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

101 ಕಲ್ಯಾಣಿ, 101 ದೇಗುಲಗಳ ಐತಿಹ್ಯ ಹೊಂದಿರುವ ಲಕ್ಕುಂಡಿ ಗ್ರಾಮದಲ್ಲಿ ಬೃಹತ್ ಸ್ವಚ್ಛತಾ ಅಭಿಯಾನದಡಿ ಸ್ವಚ್ಛತಾ ಕಾರ್ಯ ಆರಂಭವಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಇಲ್ಲಿಯ ಗ್ರಾಮ ಪಂಚಾಯತ ಸದಸ್ಯರು ಕಲ್ಯಾಣಿಗಳ ಸ್ವಚ್ಛತೆಯಲ್ಲಿ ತೊಡಗಿಕೊಂಡಿರುವುದು ವಿಶೇಷವಾಗಿದೆ.

ರಾಜ್ಯದಲ್ಲಿ ಮಂಡ್ಯ, ರಾಮನಗರ, ಗದಗ, ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಕಲ್ಯಾಣಿಗಳಿದ್ದು, ಇವುಗಳಲ್ಲಿ ಅತಿ ಹೆಚ್ಚು ಲಕ್ಕುಂಡಿ ಗ್ರಾಮದಲ್ಲಿವೆ. ಈ ದಿಸೆಯಲ್ಲಿ ಬೃಹತ್ ಸ್ವಚ್ಛತಾ ಅಭಿಯಾನದಡಿ 'ಸ್ವಚ್ಛತೆಯೇ ಸೇವೆ' ಎಂಬ ಧ್ಯೇಯವಾಕ್ಯದೊಂದಿಗೆ ಕಲ್ಯಾಣಿಗಳನ್ನು ಸ್ವಚ್ಛತೆ ಕೈಗೊಂಡಿದ್ದಾರೆ. ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಬ್ರಹ್ಮ ಜಿನಾಲಯದ ಹತ್ತಿರವಿರುವ ಕನ್ಯೆಯರ ಕಲ್ಯಾಣಿಯನ್ನು ಗ್ರಾ.ಪಂ ಅಧ್ಯಕ್ಷರು ಸೇರಿದಂತೆ ಸರ್ವ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಸ್ವಚ್ಛತೆ ಕೈಗೊಂಡರು.

ಇದಕ್ಕೂ ಪೂರ್ವ ಅಭಿಯಾನದ ಅಂಗವಾಗಿ ಗ್ರಾಮದಲ್ಲಿ ಜನ ಜಾಗೃತಿಗಾಗಿ ಶಾಲಾ ಮಕ್ಕಳಿಂದ ಪ್ರಮುಖ ಬೀದಿಗಳಲ್ಲಿ ರ‍್ಯಾಲಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣ ಮತ್ತು ಪ್ರಮುಖ ಬೀದಿಗಳಲ್ಲಿ ಸ್ವಚ್ಛತೆಯನ್ನು ಮಾಡುತ್ತಾ ಜನ ಜಾಗೃತಿ ಮೂಡಿಸಿದರು.

ಮಹಾತ್ಮರ ಧ್ಯೇಯವಾಕ್ಯ 'ಸ್ವಚ್ಛತೆಯೇ ದೈವತ್ವ' ಎಂಬ ಕನಸನ್ನು ನನಾಗಿಸಲು ಸೆ.15ರಿಂದ ಅ.2ರವರೆಗೂ 'ಸ್ವಚ್ಚತಾ ಹಿ ಸೇವಾ' ಎಂಬ ವಿಶೇಷ ಅಂದೋಲನವನ್ನು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲ ಶಕ್ತಿ ಮಂತ್ರಾಲಯ ಯೋಜನೆ ರೂಪಿಸಿದೆ. 2020ರಲ್ಲಿಯೇ ಮನೇರಗಾ ಯೋಜನೆಯಲ್ಲಿ ಕಲ್ಯಾಣಿಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಗ್ರಾಮಸ್ಥರ ಸಹಕಾರ ಪ್ರಮುಖವಾಗಿದೆ ಎಂದು ಗ್ರಾ.ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಹೇಳಿದರು.

ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸರ್ವ ಸದಸ್ಯರು, ಪಿಡಿಓ ರಾಮನಗೌಡ ಪಾಟೀಲ, ಕಾಯದರ್ಶಿ ಎಂ.ಎ ಗಾಜಿ, ಜಿಲ್ಲಾ ನೈರ್ಮಲ್ಯ ಮತ್ತು ಶುಚಿತ್ವ ಸಮಾಲೋಚಕ ಕೃಷ್ಣಾ ದೊಡ್ಡಮನಿ, ಅಕ್ಕಮ್ಮ ವಡ್ಡರ, ಸಿಬ್ಬಂದಿಗಳು ಇದ್ದರು.

### ಗದಗ ಜಿಲ್ಲಾ ದುಡಿಯುವ ಮಹಿಳೆಯರ ಪ್ರಥಮ ಸಮಾವೇಶ

# ಬೇಡಿಕೆ ಈಡೇರಿಕೆಗೆ ಹಕ್ಕೊತ್ತಾಯ



■ ವಿಜಯಸಾಕ್ಷಿ ಸುದ್ದಿ, ಗದಗ

ಚಂದ್ರಯಾನ-3 ಉಡಾವಣೆ ನಿರ್ವಹಣೆಯಿಂದ ಹಿಡಿದು ವಿದ್ಯುತ್ ಕಂಬ ಹತ್ತಿ ಕೆಲಸ ಮಾಡುವುದರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರು ಒಂದೆಡೆ ಕೌಟುಂಬಿಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇನ್ನೊಂದೆಡೆ ದುಡಿಯುವ ಮಹಿಳೆಯಾಗಿ ಶೋಷಣೆ ತಾರತಮ್ಯ, ವಂಚನೆ, ಹಿಂಸೆ ಮತ್ತು ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾಳೆ ಎಂದು ಸಿಐಟಿಯು ರಾಜ್ಯ ಸಂಚಾಲಕರಾದ ಎಚ್.ಎಸ್ ಸುನಂದಾ ಅಭಿಪ್ರಾಯಪಟ್ಟರು.

ನಗರದ ಡಾ. ಬಾಬಾ ಜಗಜೀವನರಾಮ್ ಸಮುದಾಯ ಭವನದಲ್ಲಿ ಜರುಗಿದ ಗದಗ ಜಿಲ್ಲಾ ದುಡಿಯುವ ಮಹಿಳೆಯರ ಪ್ರಥಮ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಿಜೆಪಿ ಆಡಳಿತದ ಕೇಂದ್ರ ಸರ್ಕಾರ ಇತ್ತೀಚಿನ ಬಜೆಟ್ ಮಹಿಳಾ ಸಬಲೀಕರಣಕ್ಕೆ ಇರುವ ರಾಜ್ಯಗಳ ಅಧಿಕಾರವನ್ನು ಹಿಂಪಡೆಯುವ ಸೂಚನೆ ನೀಡಿದೆ. ಹಿಂದಿನ ಬಿಜೆಪಿ ಸರ್ಕಾರವು ಕಾರ್ಖಾನೆಗಳಲ್ಲಿ ಈಗಿರುವ 9 ಗಂಟೆಗಳ ದುಡಿತದ ಅವಧಿಯನ್ನು 12ಕ್ಕೆ ಏರಿಸಿದಲ್ಲದೆ, ಮಹಿಳೆಯರು ರಾತ್ರಿ ಪಾಳಿಯಲ್ಲಿ ದುಡಿಯುವ ಪ್ರಸ್ತಾಪವನ್ನು ಅಂಗೀಕರಿಸಿದೆ. ಈಗಿನ ಸರ್ಕಾರ ಅದನ್ನು ಹಿಂಪಡೆಯಲು ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಅಂಗನವಾಡಿ, ಬಿಸಿಯೂಟ ಆಶಾ ಮತ್ತು ಇತರೇ ಸ್ಕೀಮುಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರನನ್ನು ನೌಕರರನ್ನಾಗಿ ಕ್ರಮಬದ್ಧಗೊಳಿಸಿ ಕನಿಷ್ಠ ಕೂಲಿ ನೀಡಿ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಗ್ರ್ಯಾಚುಟಿ ನೀಡಬೇಕು, ಉದ್ಯೋಗ ಖಾತರಿ ಯೋಜನೆಯಲ್ಲಿ ದಿನಕ್ಕೆ ರೂ. 600/- ರಂತೆ 200 ದಿನಗಳ ಕೆಲಸವನ್ನು ಸಕಾಲಿಕ ವೇತನಗಳ ಪಾವತಿಯೊಂದಿಗೆ ಖಚಿತಪಡಿಸಬೇಕು, ನಗರ ಉದ್ಯೋಗ ಖಾತರಿ ಕಾಯಿದೆ ಜಾರಿಗೆ ತರಬೇಕು, ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕಾನೂನು ತಕ್ಷಣ ಜಾರಿಗೆ ತರಬೇಕು, ಅನೌಪಚಾರಿಕ ಮತ್ತು ಗುತ್ತಿಗೆಯಾಧಾರದಲ್ಲಿ ದುಡಿಯುವ ಮಹಿಳೆಯರನ್ನು ಖಾಯಂ ಮಾಡಿ ಕನಿಷ್ಠ ವೇತನ ನೀಡಬೇಕು ಇವೇ ಮುಂತಾದ ಹಕ್ಕೊತ್ತಾಯಗಳನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಲಡಾಯಿ ಪ್ರಕಾಶನದವರು ಪ್ರಕಟಿಸಿರುವ 'ಮಣಿಪುರದ ದುರಂತ ಕಥನ' ಎಂಬ ಪುಸ್ತಕವನ್ನು ಸಮಾವೇಶದಲ್ಲಿ ಸೇರಿದ ಎಲ್ಲ ಮಹಿಳೆಯರಿಗೆ ವಿತರಿಸಲಾಯಿತು. ಪ್ರಾಸ್ತಾವಿಕವಾಗಿ ಸಿಐಟಿಯು ಜಿಲ್ಲಾ ಸಂಚಾಲಕ ಮಹೇಶ ಹಿರೇಮಠ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕಿ ಪೂಜಾ ಸಿಂಘೆ, ಯಶೋಧಾ ಬೆಟಗೇರಿ, ನಿಂಗಮ್ಮ ತಡಹಾಳ, ನೀಲಮ್ಮ ಬಾರದ್ವಾಡ, ಹಮಾಲರ ಸಂಘಟನೆಯ ತಾಮ್ರಗುಂಡಿ ಸೇರಿದಂತೆ ಸಾವಿರಾರು ದುಡಿಯುವ ಮಹಿಳೆಯರು ಭಾಗವಹಿಸಿದ್ದರು.

# ಕಾವೇರಿ ನೀರಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಸದಾ ಬಿಜೆಪಿ ಬೆಂಬಲವಿರುತ್ತದೆ: ಬಸವರಾಜ ಬೊಮ್ಮಾಯಿ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕಾವೇರಿ ನೀರಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಬಿಜೆಪಿ ಬೆಂಬಲ ನೀಡಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದ್ದಾರೆ.



ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಆದೇಶ ಹೊರಡಿಸಲಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು (ಸಿಡಬ್ಲ್ಯುಎಂಎ) ಈ ಹಿಂದೆ ತಮಿಳುನಾಡಿಗೆ ಪ್ರತಿನಿತ್ಯ 10,000 ಕ್ಯೂಸೆಕ್ ನೀರು ಬಿಡುವಂತೆ ಕರ್ನಾಟಕಕ್ಕೆ ಸೂಚಿಸಿದಾಗಲೇ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪರಿಣಾಮಕಾರಿಯಾಗಿ ವಾದ ಮಂಡಿಸಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಅವರು ಹೇಳಿದರು.

ಈಗಾಗಲೇ ತಮಿಳುನಾಡಿಗೆ ಹೆಚ್ಚಿನ ನೀರನ್ನು ಹರಿಸಲಾಗಿದ್ದು, ಕಾವೇರಿ ಜಲವಿವಾದ ನ್ಯಾಯಮಂಡಳಿಯ ಆದೇಶವನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ ಎಂದು ಅವರು ಹೇಳಿದರು.

ಕುಡಿಯುವ ನೀರಿಗಾಗಿ ಸರ್ಕಾರ ಇತ್ತ ಗಮನಹರಿಸಬೇಕು ಎಂಬ ಕೂಗು ಎದ್ದಿದ್ದು, ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳು ಬರದಿಂದ ತತ್ತರಿಸಿವೆ. ಮಳೆಯ ಅಭಾವದಿಂದ ಖಾರಿಫ್ ಬೆಳೆಯನ್ನು ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ ಎಂದು ದೂರಿದರು.

'ಇಲ್ಲಿಯವರೆಗೆ ಸರ್ಕಾರ ಅವರಿಗೆ ಪರಿಹಾರ ವಿತರಿಸಿಲ್ಲ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರವಾಹ ಬಂದಾಗ ರೈತರಿಗೆ ಎರಡು ಪಟ್ಟು ಪರಿಹಾರ ನೀಡಿದ್ದೇವೆ. ಬಹುತೇಕ ಸಂದರ್ಭಗಳಲ್ಲಿ ರಾಜ್ಯದ ರೈತರಿಗೆ ನಾವು ಪರಿಹಾರ ಒದಗಿಸಿದ್ದೇವೆ. ಆದರೆ, ರಾಜ್ಯ ಸರ್ಕಾರ ಯಾವುದೇ ಪರಿಹಾರ ನೀಡಿಲ್ಲ. ಕಾವೇರಿ ನದಿ ಅಷ್ಟೇ ಅಲ್ಲ ಕೃಷ್ಣೆಯ ಹಿತರಕ್ಷಣೆಗೂ ಸರ್ಕಾರ ಮುಂದಾಗಬೇಕು. ಕೃಷ್ಣಾ ನೀರಿನ ವಿಚಾರದಲ್ಲಿ ಬಿಜೆಪಿ ಸ್ಪಷ್ಟ ನಿಲುವು ಹೊಂದಿದೆ' ಎಂದು ಬೊಮ್ಮಾಯಿ ಹೇಳಿದರು.

ಬಿಜೆಪಿಯ ಮಾಜಿ ಶಾಸಕರನ್ನು ಕಾಂಗ್ರೆಸ್ ಸೆಳೆಯುತ್ತಿರುವ ವಿಚಾರವಾಗಿ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ವರ್ಚಸ್ಸನ್ನು ಕಳೆದುಕೊಂಡಿದೆ. ಹೀಗಾಗಿ ಕಾಂಗ್ರೆಸ್ ಮತ್ತೆ ಆಪರೇಷನ್‌ಗೆ ಮುಂದಾಗಿದೆ. ಇದು ಅದರ ದೌರ್ಬಲ್ಯವನ್ನು ಸೂಚಿಸುತ್ತದೆ. ಟಿಕೆಟ್ ಸಿಗದ ಕೆಲವರು ಕಾಂಗ್ರೆಸ್‌ಗೆ ಹೋಗಿದ್ದಾರೆ. ಇದರಿಂದ ಕಾಂಗ್ರೆಸ್‌ಗೆ ಯಾವುದೇ ಲಾಭವಾಗುವುದಿಲ್ಲ. ಟಿಕೆಟ್ ಸಿಗದವರು ಹೋಗುವುದು ಸಹಜ. ಅದರ ಬಗ್ಗೆ ನಾವು ಹೆಚ್ಚು ಚಿಂತಿಸುವುದಿಲ್ಲ. ಕಾಂಗ್ರೆಸ್‌ನ ಆಪರೇಶನ್‌ನಿಂದ ರಾಜಕೀಯವಾಗಿ ಯಾವುದೇ ಪ್ರಯೋಜನವಿಲ್ಲ' ಎಂದರು.

### ಹಿಂಗಾರು ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್ ಪಾಟೀಲ

# ಶೀಘ್ರವೇ ರೈತರ ಖಾತೆಗೆ ಬೆಳೆ ವಿಮಾ ಪಾವತಿ

■ವಿಜಯಸಾಕ್ಷಿ ಸುದ್ದಿ, ರೋಣ

ಅತಿ ಶೀಘ್ರ ತಾಲೂಕಿನ ರೈತರ ಖಾತೆಗೆ ಬೆಳೆ ವಿಮೆಯ ಹಣ ಸಂದಾಯವಾಗಲಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.




ಅವರು ಗುರುವಾರ ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಹಿಂಗಾರು ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ರಚನೆಯಾದ ತಕ್ಷಣ ಜಿಲ್ಲೆಯಲ್ಲಿ ಜರುಗಿದ ಕೆಡಿಪಿ ಸಭೆಯಲ್ಲಿ ರೈತರಿಗೆ ಶೀಘ್ರವೇ ಬೆಳೆ ವೀಮಾ ಹಣವನ್ನು ಜಮಾವಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳೂ ಸೇರಿದಂತೆ ಸಂಭಂದಪಟ್ಟ ಇಲಾಖೆಯ ಅಧಿಕಾರಿಗಳಿಗೆ ಒತ್ತಾಯಿಸಲಾಗಿತ್ತು. ಇದರ ಪ್ರತಿಫಲವಾಗಿ ಇಂದು ಅನುದಾನ ಬಿಡುಗಡೆಗೊಂಡಿದ್ದು, ವಾರದಲ್ಲಿ ರೈತರ ಖಾತೆಗಳಿಗೆ ಹಣ ಜಮಾವಣೆಯಾಗಲಿದೆ ಎಂದರು.

> ಶಾಸಕ ಜಿ.ಎಸ್ ಪಾಟೀಲ ಸತತ ನಾಲ್ಕು ಗಂಟೆಗಳ ಕಾಲ ರೈತರಿಂದ ಸಂಪೂರ್ಣ ಮಾಹಿತಿ ಪಡೆದುಕೊಂಡು, ಕೃಷಿ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇದು ರೈತರಿಂದ ಕೇಳಿ ಬಂದಿರುವ ಗಂಭೀರ ಆರೋಪವಾಗಿದ್ದು, ಸಹಿಸಲು ಸಾಧ್ಯವಿಲ್ಲ. ಬಿಜಾಜ್ ಕಂಪನಿ ಕುರಿತು ಹಿರಿಯ ಅಧಿಕಾರಿಗಳ ಮೂಲಕ ಸರಕಾರದ ಗಮನಕ್ಕೆ ತನ್ನಿ. ನಾಲ್ಕು ವರ್ಷಗಳಿಂದ ನೆನಗುದಿಗೆ ಬಿದ್ದಿರುವ ವಿಮಾ ಪಾವತಿ ಕುರಿತು ಸಮಗ್ರ ವರದಿಯನ್ನು ಸಲ್ಲಿಸಿ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ತಾರಮಣಿಯವರಿಗೆ ಶಾಸಕರು ತಾಕೀತು ಮಾಡಿದರು.

ಬಜಾಜ್ ಕಂಪನಿಯೊಂದಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಸರಿಯಾಗಿ ಸಂವಹನ ನಡೆಸದೇ ರೈತರಿಗೆ ಅನ್ಯಾಯವಾಗುತ್ತಿದೆ. ಮುಖ್ಯವಾಗಿ ಏಜೆಂಟರ ಹಾವಳಿ ವಿಪರೀತವಾಗಿದ್ದು, ಕಮೀಷನ್ ಆಧಾರದಲ್ಲಿ ಬೆಳೆ ವಿಮಾ ಜಾರಿಗೆ ಬರುತ್ತಿದೆ. ಬಜಾಜ್ ಕಂಪನಿ ಬೇಡ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸಹ ಅದೇ ಕಂಪನಿಗೆ ವಿಮಾ ತುಂಬಿ ಎಂದಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ನೆರೆದಿದ್ದ ರೈತರು ಶಾಸಕರ ಎದುರಲ್ಲಿ ಗಂಭೀರ ಆರೋಪ ಮಾಡಿದರು.

ಕಳೆದ ನಾಲ್ಕು ವರ್ಷಗಳಿಂದ ಬೆಳೆ ವಿಮಾ ದೊರಕಿಲ್ಲ ಎನ್ನುವುದು ರೈತರ ಅತಿ ಗಂಭೀರ ಆರೋಪವಾಗಿದೆ. ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ತಮ್ಮ ಸೇವೆ ಸಲ್ಲಿಸಬೇಕು. ಅಲ್ಲದೆ ರೈತರ ಬೇಕು ಬೇಡಿಕೆಗಳ ವಸ್ತುಸ್ಥಿತಿಯ ವರದಿಗಳನ್ನು ತಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು. ಅಂದಾಗ ರೈತರಿಗೆ ನ್ಯಾಯ ಸಿಗಲು ಸಾಧ್ಯವಾಗುತ್ತದೆ ಎಂದ ಅವರು, ಬರಗಾಲದ ಸಮಯದಲ್ಲಿ ಮೇವಿನ ಕೊರತೆಯಾಗದಂತೆ ನಿಗಾವಹಿಸಬೇಕು ಎಂದು ಸೂಚಿಸಿದರು. ಜಂಟಿ ನಿರ್ದೇಶಕಿ ತಾರಾಮಣಿ, ಯೂಸುಫ್ ಇಟಗಿ, ವೀರಣ್ಣ ಶೆಟ್ಟರ, ರವೀಂದ್ರ ಪಾಟೀಲ, ಬಸವರಾಜ ನವಲಗುಂದ, ಅಪ್ಪು ಗಿರಡ್ಡಿ, ಸಂಗು ನವಲಗುಂದ ಸೇರಿದಂತೆ ಕೃಷಿಕ ಸಮಾಜದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕಾರು- ಬಸ್ ಡಿಕ್ಕಿ; ತಂದೆ, ಮಗ ಸ್ಥಳದಲ್ಲೇ ಸಾವು



■ವಿಜಯಸಾಕ್ಷಿ ಸುದ್ದಿ, ಗದಗ

ಸಾರಿಗೆ ಸಂಸ್ಥೆಯ ಬಸ್ ಹಾಗೂ ಕಾರು ಮಧ್ಯೆ ಡಿಕ್ಕಿ ಸಂಭವಿಸಿದ ಪರಿಣಾಮವಾಗಿ ಕಾರಿನಲ್ಲಿದ್ದ ತಂದೆ ಮತ್ತು ಮಗ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುರುವಾರ ತಾಲೂಕಿನ ಲಕ್ಕುಂಡಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಜರುಗಿದೆ.

ಹೊಸಪೇಟೆ ನಿವಾಸಿಗಳಾದ ಡಾ.ಎಚ್.ಬಾಲರಾಜ(85) ಹಾಗೂ ವಿನಯ್ ಕುಮಾರ್(28) ಮೃತಪಟ್ಟಿದ್ದಾರೆ.





ಮೃತರು ಹೊಸಪೇಟೆ ನಗರದ ಸಂಡೂರ್ ರಸ್ತೆಯ ನಿವಾಸಿಗಳಾಗಿದ್ದು, ಡಾ.ಎಚ್.ಬಾಲರಾಜ ಅವರು ಈ ಹಿಂದೆ ಹೊಸಪೇಟೆಯ ಬಿಇಒ, ಬಳ್ಳಾರಿ ಜಿಲ್ಲೆಯ ಡಿಡಿಪಿಐ ಹಾಗೂ ಜಂಟಿ ನಿರ್ದೇಶಕರಾಗಿ ನಿವೃತ್ತರಾಗಿದ್ದರು. ಕಳೆದ ವರ್ಷ ಹೊಸಪೇಟೆಯಲ್ಲಿ ಆಯೋಜಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪ್ರಥಮ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಅವರ ಮಗ ವಿನಯ್ ಕುಮಾರ್ ಗಂಗಾವತಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಡಾ.ಎಚ್.ಬಾಲರಾಜ ತಮ್ಮ ಮಗನೊಂದಿಗೆ ಕಾರಿನಲ್ಲಿ ಹೊಸಪೇಟೆಯಿಂದ ಹುಬ್ಬಳ್ಳಿಗೆ ಹೊರಟ್ಟಿದ್ದರು. ಈ ವೇಳೆ ಗದಗ ಹೊರವಲಯದ ಲಕ್ಕುಂಡಿ ತಿರುವು ಬಳಿ ಕಾರಿಗೆ ಸಾರಿಗೆ ಬಸ್ ಮುಖಾಮುಖಿಯಾಗಿದ್ದು, ಭೀಕರ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದವರು ನಜ್ಜುಗುಜ್ಜಾಗಿದ್ದು, ಬಸ್ ನಿಯಂತ್ರಣ ತಪ್ಪಿ ರಸ್ತೆ ಪಕ್ಕಕ್ಕೆ ಉರುಳಿ ಬಿದ್ದಿದೆ.

ಇದರಿಂದ ಬಸ್‌ನಲ್ಲಿದ್ದ ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಜಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಘಟನೆ ಕುರಿತು ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಈದ್ ಮಿಲಾದ್ ಪ್ರಯುಕ್ತ ಬೃಹತ್ ಮೆರವಣಿಗೆ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿಯಲ್ಲಿ ಪ್ರವಾದಿ ಮುಹಮ್ಮದ್ ಪೈಗಂಬರ್ ಅವರ ಜನ್ಮದಿನದ ಅಂಗವಾಗಿ ಈದ್-ಮಿಲಾದನ್ನು ಗುರುವಾರ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಸಂಭ್ರಮ-ಸಡಗರದಿಂದ ಆಚರಿಸಿದರು.



ಬೆಳಿಗ್ಗೆಯಿಂದಲೇ ಪಟ್ಟಣದ ವಿವಿಧ ಭಾಗಗಳಲ್ಲಿ ಮುಸ್ಲಿಂ ಬಾಂಧವರು ಪರಸ್ಪರ ಈದ್ ಶುಭಾಶಯ ಕೋರಿದರು. ಆಸಾರ ಓಣಿ, ಮಕಾನಗಲ್ಲಿ, ತಳಗೇರಿ ಓಣಿ, ಮೇಗೇರಿ ಓಣಿ, ಇಂಗಲಾಪೂರ ಸೇರಿದಂತೆ ಮುಸ್ಲಿಂ ಬಾಂಧವರು ಹೆಚ್ಚು ಇರುವ ಬಡಾವಣೆಗಳ ಬೀದಿಗಳು ಹಸಿರು ಬಾವುಟ, ತೋರಣಗಳಿಂದ ಸಿಂಗರಿಸಲ್ಪಟ್ಟಿದ್ದವು. ಪಟ್ಟಣದ ಪ್ರಮುಖ ವೃತಗಳಲ್ಲಿ ಹಬ್ಬಕ್ಕೆ ಶುಭಾಶಯ ಕೋರುವ ಬ್ಯಾನರ್‌ಗಳು ರಾರಾಜಿಸುತ್ತಿದ್ದವು.

ಹೊಸ ಬಟ್ಟೆಗಳನ್ನು ಧರಿಸಿದ ಯುವಕರು ಬೈಕ್, ಅಟೋ, ಕಾರುಗಳಿಗೆ ಬಾವುಟ ಹಚ್ಚಿ ಸಡಗರದಿಂದ ಓಡಾಡುತ್ತಿದ್ದರು. ಮಧ್ಯಾಹ್ನದ ನಂತರ ನಡೆದ ಬೃಹತ್ ಮೆರವಣಿಗೆಯಲ್ಲಿ ಯುವಕರು, ಮಕ್ಕಳು ಸೇರಿದಂತೆ ಸಾವಿರಾರು ಜನರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.

# ಜಿಲ್ಲೆಯ ಜನತೆ ಇಂದಿನ ಬಂದ್ ಬೆಂಬಲಿಸಲು ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ಕಾವೇರಿ ನೀರು ನಿರ್ವಹಣಾ ಸಮಿತಿಯು ಕಾವೇರಿ ನದಿ ನೀರು ವಿಚಾರದಲ್ಲಿ ನೀಡಿರುವ ತೀರ್ಪು ಕರ್ನಾಟಕದ ಪಾಲಿಗೆ ಮರಣ ಶಾಸನವಾಗಿದೆ. ಕಾವೇರಿ ಜಲಾನಯನ ಪ್ರದೇಶದ ರೈತರ ಬದುಕು ದುಸ್ತರವಾಗುವ ಸ್ಥಿತಿ ಬಂದೊದಗಿದ್ದು, ಕರ್ನಾಟಕ ಸರ್ಕಾರ ಕಾವೇರಿ ನೀರು ನಿರ್ವಹಣೆ ಸಮಿತಿಗೆ ಸೂಕ್ತವಾದ ವಿಚಾರವನ್ನು ಮನವರಿಕೆ ಮಾಡಲು ವಿಫಲವಾಗಿದೆ. ಹೀಗಾಗಿ, ಶುಕ್ರವಾರ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ಗದಗ ತಾಲೂಕಿನಾದ್ಯಂತ ಬಂದ್ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಶೆಟ್ಟಿ ಬಣ) ಗದಗ ತಾಲೂಕಾ ಅಧ್ಯಕ್ಷ ಪರಶುರಾಮ ಬಂಕದಮನಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಗದಗ ತಾಲೂಕಿನ ಎಲ್ಲಾ ವರ್ತಕರು, ಹೋಟೆಲ್ ಮಾಲೀಕರು, ರಸ್ತೆ ಬದಿ ವ್ಯಾಪಾರಿಗಳು, ಎಲ್ಲಾ ಸಂಘ-ಸಂಸ್ಥೆಗಳು, ಶಾಲಾ ಕಾಲೇಜುಗಳು, ಬ್ಯಾಂಕುಗಳು, ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳು, ಕಾರ್ ಮತ್ತು ಅಟೋ ಮಾಲಕರು ಮತ್ತು ಚಾಲಕರು ಹಾಗೂ ಇತರ ವ್ಯಾಪಾರಸ್ಥರು ಬಂದ್‌ಗೆ ಬೆಂಬಲ ನೀಡಿ ಸಹಕರಿಸಬೇಕೆಂದು ವಿನಂತಿಸಿದ್ದಾರೆ.

# ಸಡಗರದ ಪ್ರವಾದಿ ಪೈಗಂಬರ ಜಯಂತಿ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಅವಳಿ ನಗರದಾತ್ಯಂತ ಪ್ರವಾದಿ ಮುಹಮದ್ ಪೈಗಂಬರರ ಜಯಂತಿಯನ್ನು ಅದ್ದೂರಿಯಾಗಿ, ಶಾಂತಿಯುತವಾಗಿ ಆಚರಿಸಲಾಯಿತು.

ನಗರದ ಹುಯಿಲಗೋಳ ಆಸ್ಪತ್ರೆ ಹತ್ತಿರ ಇರುವ ಮದನಿ ಮಸ್ಜಿದ್‌ನಿಂದ ಮೆರವಣಿಗೆ ಆರಂಭಗೊಂಡು, ರಾಣಿ ಚನ್ನಮ್ಮ ಸರ್ಕಲ್, ಮುಳಗುಂದ ನಾಕಾ, ಜುಮ್ಮಾ ಮಸ್ಜಿದ್, ಹತ್ತಿಕಾಳ ಕೂಟ, ಹುಯಿಲಗೋಳ ನಾರಾಯಣ ರಾವ್ ಸರ್ಕಲ್, ಮಹೇಂದ್ರಕರ್ ಸರ್ಕಲ್, ಗಾಂಧಿ ಸರ್ಕಲ್ ಮಾರ್ಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ, ಹಳೆ ಬಸ್ ನಿಲ್ದಾಣದ ಹತ್ತಿರ ಇರುವ ಉರ್ದು ಸೆಂಟ್ರಲ್ ಶಾಲೆ ತಲುಪಿತು.

ಮೆರವಣಿಗೆಯ ನೇತೃತ್ವವನ್ನು ಮೌಲಾನಾ ಮೊಹಮ್ಮದ್ ಅಂಜರ್ ವಹಿಸಿಕೊಂಡಿದ್ದರು. ಮೆರವಣಿಗೆಯುದ್ದಕ್ಕೂ ಪ್ರವಾದಿಯವರ ಗುಣಗಾನ, ಶಾಂತಿ ಸಂದೇಶಗಳು, ಅವರ ಜೀವನ ಚರಿತ್ರೆಯನ್ನು ಜನರಿಗೆ ತಿಳಿಸುತ್ತಾ ಸಾಗಿದರು. ಈ ಸಂದರ್ಭದಲ್ಲಿ ಮಕಾಂದರ, ಪೀರ್‌ಜಾದೆ, ಖಾಜಿ ಖತೀಬ್ ಸೇರಿದಂತೆ ನೂರಾರು ಜನ ಪಾಲ್ಗೊಂಡಿದ್ದರು.

# ಶ್ರೀ ಗುರುಕುಮಾರ ಜಯಂತ್ಯುತ್ಸವ ನಾಳೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ನಿಡಗುಂದಿಕೊಪ್ಪದ ಶಾಖಾ ಶಿವಯೋಗಮಂದಿರದಲ್ಲಿ ಶನಿವಾರ ಕಾರಣಿಕ ಯುಗ ಪುರುಷ, ಹಾನಗಲ್ಲ ಶ್ರೀ ಗುರುಕುಮಾರೇಶ್ವರರ 156ನೇ ಜಯಂತ್ಯುತ್ಸವವನ್ನು ಬೆಳಿಗ್ಗೆ 9ಕ್ಕೆ ಆಚರಿಸಲಾಗುತ್ತಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಅಂದು ಬೆಳಿಗ್ಗೆ 8ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾನಗಲ್ಲ ಶ್ರೀ ಗುರುಕುಮಾರ ಶಿವಯೋಗಿಗಳವರ ಭಾವಚಿತ್ರದ ಮೆರವಣಿಗೆಯು ಸಕಲ ವಾದ್ಯ ವೈಭವಗಳೊಂದಿಗೆ ಜರುಗಲಿದೆ. ನಂತರ ನಡೆಯುವ ಧರ್ಮ ಸಭೆಯ ದಿವ್ಯ ಸಾನ್ನಿಧ್ಯವನ್ನು ಶ್ರೀಮಠದ ಪೀಠಾಧಿಪತಿಗಳಾದ ಅಭಿನವ ಚನ್ನಬಸವ ಮಹಾಸ್ವಾಮಿಗಳು ವಹಿಸಿಕೊಳ್ಳಲಿದ್ದಾರೆ. ವೇ.ಮೂ. ಶ್ರೀ ಸಿದ್ಧಲಿಂಗಯ್ಯ ಶಾಸ್ತ್ರಿಗಳು ಗುಡದೂರಕಲ್ಲಮಠ ಇವರು ನುಡಿ ನಮನಗಳನ್ನು ಸಲ್ಲಿಸಲಿದ್ದಾರೆ.

ಇಸ್ರೋ ಕೇಂದ್ರದ ವಿಜ್ಞಾನಿ ಬಸವರಾಜ ವೆಂಕಣ್ಣ ಕಲ್ಲಕುಟಿಗರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಸನ್ಮಾನ ಸಮಾರಂಭ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

# ಮಂಗಳೂರಿನ ಕಡಲ ಪ್ರದೇಶದಲ್ಲಿ ಸಿಲುಕಿದ್ದ 10 ಮೀನುಗಾರರನ್ನು ರಕ್ಷಿಸಿದ ಭಾರತೀಯ ಕೋಸ್ಟ್ ಗಾರ್ಡ್

■ವಿಜಯಸಾಕ್ಷಿ ಸುದ್ದಿ, ಮಂಗಳೂರು

ಮಂಗಳೂರಿನ ಕಡಲ ಪ್ರದೇಶದಲ್ಲಿ ಸಿಲುಕಿದ್ದ 10 ಮೀನುಗಾರರನ್ನು ಭಾರತೀಯ ಕೋಸ್ಟ್ ಗಾರ್ಡ್ ರಕ್ಷಣೆ ಮಾಡಿದೆ.

ಮೀನುಗಾರಿಕಾ ಇಲಾಖೆಯ ಸಹಯೋಗದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದ್ದು, ದೋಣಿಯಲ್ಲಿದ್ದ ಆಳ ನೀರು ಪ್ರದೇಶದಲ್ಲಿ ಸಿಲುಕಿಕೊಂಡಿದ್ದ 10 ಮೀನುಗಾರರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಿರ್ಚೆಂದೂರ್ ಮುರುಗನ್ ಬೋಟ್‌ನಲ್ಲಿದ್ದ 10 ಮೀನುಗಾರರು ಸೆ.20 ರಂದು ಕಡಲ ಪ್ರದೇಶದಲ್ಲಿ ಪ್ರಯಾಣ ಆರಂಭಿಸಿದ್ದರು. ಆದರೆ ಸೆ.24 ರಂದು ಇಂಜಿನ್ ಶಾಫ್ಟ್ ಸಮಸ್ಯೆಯ ಪರಿಣಾಮ 39 ನಾಟಿಕಲ್ ಮೈಲಿಗಳಷ್ಟು ದೂರದಲ್ಲಿ ಮೀನುಗಾರರು ಸಿಲುಕಿದ್ದರು.

ಅಧಿಕಾರಿಗಳ ಪ್ರಕಾರ, ಮುಂಬೈನ ಕಡಲ ರಕ್ಷಣಾ ಸಮನ್ವಯ ಕೇಂದ್ರ ಸಿಲುಕಿದ್ದ ಮೀನುಗಾರಿಕಾ ದೋಣಿಯಿಂದ ದುರಂತದ ಸಂಕೇತವನ್ನು ಸ್ವೀಕರಿಸಿ ಗುರುವಾರ ಅದನ್ನು ಕರಾವಳಿ ರಕ್ಷಣಾ ಪಡೆ ಜಿಲ್ಲಾ ಕೇಂದ್ರಕ್ಕೆ (ಕರ್ನಾಟಕ) ರವಾನಿಸಿತ್ತು.

# ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ತೋಂಟದ ಸಿದ್ಧೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕ್ರೀಡೆ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಬಿಪಿನ್ ಚಿಕ್ಕಟ್ಟಿ ಪದವಿಪೂರ್ವ ಮಹಾವಿದ್ಯಾಲಯಗಳ ಆಶ್ರಯದಲ್ಲಿ ಜರುಗಿದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಯಲ್ಲಪ್ಪ ಬಡಪ್ಪನವರು ವೈಯಕ್ತಿಕ 400ಮೀ ಓಟದಲ್ಲಿ ಪ್ರಥಮ, ದೇವಿಕಾ ಎಸ್.ಎನ್ ಸರಪಳಿ ಗುಂಡು ಎಸೆತದಲ್ಲಿ ದ್ವಿತೀಯ, ಯೋಗಾ ಸ್ಪರ್ಧೆಯಲ್ಲಿ ಅಕ್ಷತಾ ಇಂಗಳಳ್ಳಿ ದ್ವಿತೀಯ ಹಾಗೂ ಪ್ರಜ್ವಲ್ ಬಾಪೂರಿ ವಯಕ್ತಿಕ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಳ್ಳುವದರೊಂದಿಗೆ ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗಳಿಗೆ ಜ. ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್ ಪಟ್ಟಣಶೆಟ್ಟರ, ಸ್ಥಳೀಯ ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಕೆ.ಡಿ ಮೆಣಸಿನಕಾಯಿ, ಉಪ ಪ್ರಾಚಾರ್ಯ ವಾಯ್.ಎಸ್ ಮತ್ತೂರ ಮತ್ತು ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

### ಪೈಗಂಬರರ ಜಯಂತಿ ಅಂಗವಾಗಿ 6ನೇ ವರ್ಷದ ಉಚಿತ ರಕ್ತದಾನ ಶಿಬಿರ

# ಪೈಗಂಬರರ ಸಮಾನತೆಯ ಸಂದೇಶ ಅತ್ಯಮೂಲ್ಯ

■ವಿಜಯಸಾಕ್ಷಿ ಸುದ್ದಿ, ಡಂಬಳ

ದೇಶ ಸೇವೆಯೊಂದಿಗೆ ತ್ಯಾಗಮಯಿಯಾಗಿ, ಜನರ ಒಳತಿಗಾಗಿ ತಮ್ಮನ್ನು ತೊಡಗಸಿಕೊಂಡು ಸದ್ವಿಚಾರಗಳನ್ನು ಸದಾಕಾಲ ಮಾಡುತ್ತಾರೋ ಅವರು ಮಹಾತ್ಮರಾಗುತ್ತಾರೆ. ಈ ನಿಟ್ಟಿನಲ್ಲಿ ಮುಹಮ್ಮದ ಪೈಗಂಬರರು ಹಾಕಿಕೊಟ್ಟ ವಿಶ್ವ ಬಾಂಧವ್ಯ, ಮಾನವ ಸಮಾನತೆಯ ಸಂದೇಶ ಅಮೂಲ್ಯವಾದದ್ದು. ಪ್ರವಾದಿ ಮುಹಮ್ಮದ ಪೈಗಂಬರರು ಹಾಕಿಕೊಟ್ಟ ಚಿಂತನೆಯಡಿ ಇಂದು ರಕ್ತದಾನ ಶಿಬಿರ ಹಮ್ಮಿಕೊಂಡಿರುವುದು ಪ್ರಶಂಸನೀಯ ಎಂದು ಬೈರನಹಟ್ಟಿಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಹೇಳಿದರು.



ಡಂಬಳ ಗ್ರಾಮದ ಜಾಮಿಯಾ ಮಸೀದಿಯ ಆವರಣದಲ್ಲಿ ಅಂಜುಮನ್ ಕಮಿಟಿ ವತಿಯಿಂದ ಹಜರತ ಮುಹಮ್ಮದ ಪೈಗಂಬರರ ಜಯಂತ್ಯುತ್ಸವದ ಆಚರಣೆ ಮತ್ತು ಉಚಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಳಗಟ್ಟಿಯ ಹಜರತ ಮುಸ್ತಫಾ ಖಾದ್ರಿ ಮಾತನಾಡಿ, ಪೈಗಂಬರರು ಸೂಚಿಸಿದ ಸನ್ಮಾರ್ಗದಲ್ಲಿ ನಡೆದರೆ ನಮ್ಮ ಬದುಕು ಉತ್ತಮವಾಗಲಿದೆ ಎಂದು ಹೇಳಿದರು. ಧರ್ಮಗುರುಗಳಾದ ಅಬ್ದುಲ್ ಖಾದರಸಾಬ ಮುಲ್ಲಾ ಮಾತನಾಡಿ, ದೇಶವನ್ನು ಏಕತೆಯಿಂದ ಕಟ್ಟಬೇಕಾಗಿದೆ. ಸಾವಿರಾರು ವರ್ಷಗಳ ಹಿಂದೆಯೇ ಪೈಗಂಬರರು ಸಮಾನತೆ ಉದಾತ್ತ ಸಿದ್ಧಾಂತಗಳನ್ನು ಬೋಧಿಸಿದ್ದರು. ಸತತ 6 ವರ್ಷಗಳಿಂದ ಪೈಗಂರರ ಜಯಂತಿಯಂದು ರಕ್ತದಾನ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿಸಿದ್ದೀರಿ ಎಂದು ಹೇಳಿದರು.

> ಜಶ್ನೆ ಎ-ಈದ್-ಮಿಲಾದುನ್ನಬಿ ಜುಲುಸ್ ಅಲ್ಲಾನ ಸಂದೇಶಗಳನ್ನು ಹೇಳುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಜಿಲ್ಲಾ ರಕ್ತಭಂಡಾರ ಹಾಗೂ ಪಿಎಚ್‌ಸಿ ಡಂಬಳ ವೈದ್ಯರ ಸಹಕಾರದೊಂದಿಗೆ 45 ಯುವಕರು ರಕ್ತದಾನ ಮಾಡಿದರು. ಮಕ್ಕಳಿಂದ ಖುರಾನ ಪಠಣ, ಸಾಂಸ್ಕೃತಿಕ ಕಾರ್ಯಕ್ರಮಗಳು, ಅನ್ನ ಸಂತರ್ಪಣೆ ಜರುಗಿತು.

ಶಿಕ್ಷಕ ಮಹ್ಮದಶಫಿ ಯರಗುಡಿ ಉಪನ್ಯಾಸ ನೀಡಿ, ಸಮಾಜವನ್ನು ಸರಿ ದಾರಿಗೆ ತಂದು, ಸಮಾನತೆಯಿಂದ ಬದುಕಿ ಎಂಬ ಸಂದೇಶ ಸಾರಿದ ಮಹಾನ್ ಚೇತನರ ಚಿಂತನೆಗಳು ಸದಾ ಇರುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಂಜುಮನ್ ಅಧ್ಯಕ್ಷ ಬಶೀರಹಮ್ಮದ ತಾಂಬೋಟಿ, ಜಿ.ವಿ ಹಿರೇಮಠ, ವಿ.ಎಸ್ ಯರಾಶಿ, ಮರಿತೇಮಪ್ಪ ಆದಮ್ಮನವರ, ಆರ್.ಜಿ ಕೊರ್ಲಹಳ್ಳಿ, ಪೀರಮಹಮ್ಮದ ತಾಂಬೋಟಿ, ಸಿದ್ದಪ್ಪ ನಂಜಪ್ಪನವರ, ಉಪತಹಸೀಲ್ದಾರ ಸಿ.ಕೆ ಬಳುಟಗಿ, ಗೌಸಿದ್ದ ಬಿಸನಳ್ಳಿ, ಚೆನ್ನಪ್ಪ ಪ್ಯಾಟಿ, ವಿರುಪಾಕ್ಷಪ್ಪ ಲಕ್ಕುಂಡಿ, ಮಲ್ಲೇಶಪ್ಪ ಮಠದ, ಮಹಾಂತೇಶ, ಅಶೋಕ ಹಡಪದ, ಖಾಜಾಹುಸೇನ ಹೊಸಪೇಟಿ, ಬುಡ್ನೆಸಾಬ ಅತ್ತಾರ, ಶಂಕ್ರಪ್ಪ ಗಡಗಿ, ಮಂಜುನಾಥ ಸಂಜೀವನ್ನವರ, ಜಾಕೀರ ಮೂಲಿಮನಿ, ಶಫೀಕ ಮೂಲಿಮನಿ, ಬಾಬುಸಾಬ ಸರಕಾವಾಸ, ಮಿರಸಾಬ ದೊಡ್ಡಮನಿ, ಮಹಮ್ಮದಲಿ ಸರಕಾವಾಸ, ಆಸಿಫ್ ತಾಂಬೋಟಿ, ರಾಜಾಭಕ್ಷಿ ಡಾಲಾಯತ, ಕರಿಂಮಸಾಬ ಸರಕವಾಸ, ಅಮಿರ ದೊಡ್ಡಮನಿ, ಸದ್ದಾಂ ರಜಾಕನವರ, ಗ್ರಾಮದ ಹಿರಿಯರು, ಯುವಕರು, ಅಂಜುಮನ್ ಕಮಿಟಿ ಸದಸ್ಯರು ಇದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka